

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SK NEWS ಕನ್ನಡ

SIHI KAHI

KANNADA DAILY MORNING

BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 08 | Issue : 42 | Monday 20-10-2025 | E-mail : maruti.b.hosamani76@gmail.com | Page: 4 | Price : Rs. 1/-

## "ಬೆಳಕಿನ ಹಬ್ಬ ದೀಪಾವಳಿ"



ಅಂಧಕಾರದಲಿ ದಿವ್ಯ ಚೇತನದ ಬೆಳಕು ಬೆಳಗಿಸಿ
ಮೂಢನಂಬಿಕೆಯಲಿ ಜ್ಞಾನದ ಜ್ಯೋತಿಯ ಹೊತ್ತಿಸಿ
ಸುಳ್ಳಿನ ಲೋಕದಲಿ ಸತ್ಯದ ನುಡಿದೀಪ ಹತ್ತಿಸಿ
ಬೆಳಕಿನ ಹಬ್ಬ ದೀಪಾವಳಿಯ ಆಚರಿಸಿ
ಸ್ವಾರ್ಥ ಹೃದಯದಿ ನಿಸ್ವಾರ್ಥದ ಜ್ಯೋತಿಯ ಮೂಡಿಸಿ
ನೋವಿನ ನಡುವೆ ನೆಮ್ಮದಿಯ ದೀಪ ಹಚ್ಚಿಸಿ
ನಮ್ಮವರು ತಮ್ಮವರೆಂಬ ಸೌಜನ್ಯದ ಜ್ಯೋತಿ ಸ್ಮರಿಸಿ
ದೀಪದಿಂದ ದೀಪವ ಹಚ್ಚಿ ದೀಪಾವಳಿಯ ಸಂಭ್ರಮಿಸಿ
ಕತ್ತಲೆಯ ಮಧ್ಯದಲಿ ಭವಿಷ್ಯದ ದೀಪವ ಕಾಣಿಸಿ
ಸೋಲುಗಳ ನಡುವೆ ಗೆಲುವಿನ ದೀಪವ ಸ್ವೀಕರಿಸಿ
ದ್ವೇಷ ವೈಷಮ್ಯಗಳ ಆಕ್ರೋಶಗಳಲಿ
ಸ್ನೇಹದ ಜ್ಯೋತಿ ತೋರಿಸಿ
ಪಟಾಕಿಗಳ ಹಬ್ಬ ದೀಪಾವಳಿಯ ಪ್ರೀತಿಯಿಂದ ಸ್ವಾಗತಿಸಿ
ಅನ್ಯಾಯ ಅಕ್ರಮಗಳಲಿ ನ್ಯಾಯ ನೀತಿಯ ದೀಪ ಬೆಳಗಿಸಿ
ಅಧರ್ಮದ ಹಾದಿ ಬಿಟ್ಟು ಧರ್ಮದ ದೀಪ ಪೂಜಿಸಿ
ನಾನು ಎಂಬ ಅಹಂಕಾರದ ಮಧ್ಯೆ ನಾವು ಎಂಬ ಭಾವ ಇರಿಸಿ
ಈ ದಿನ ಈ ಕ್ಷಣ ನಲಿವಿನ ದೀಪಾವಳಿಯ ಆಚರಿಸಿ


ನಿಸ್ವಾರ್ಥದ ಹಣತೆಯಲಿ, ನಂಬಿಕೆ ಎಂಬ ಬತ್ತಿಗೆ, ಮಾನವೀಯತೆಯ ಎಣ್ಣೆ ಹಾಕಿ, ಕಲ್ಮಶವಿಲ್ಲದ ಬೆಂಕಿಯೊಂದಿಗೆ ಆತ್ಮವಿಶ್ವಾಸದ ಜ್ಯೋತಿಯ ಬೆಳಗಿಸೋಣ, ದೀಪಾವಳಿಯ ಸಂಭ್ರಮಿಸೋಣ


**ಸರ್ವರಿಗೂ ದೀಪಾವಳಿ ಹಬ್ಬದ ಪ್ರೀತಿಯ ಶುಭಾಶಯಗಳು...**



**– ಶ್ರೀ ಮುತ್ತು.ಯ.ವಡ್ಡರ**
**( ಶಿಕ್ಷಕರು, ಹಿರೇಮಾಗಿ) ಬಾಗಲಕೋಟ**
**ಮೊ : 9845568484**

# ಬೆಳ್ಳಿ ತೆರೆಗೆ ಬರಲು–ಸಜ್ಜಾದ "ಮಾವುತ"





**ಬೆಂಗಳೂರು :** ಎಸ್.ಡಿ.ಆರ್ ಪ್ರೊಡಕ್ಷನ್ ಅವರ ದ್ವಿತೀಯ ಚಿತ್ರ 'ಮಾವುತ' ಚಲನ ಚಿತ್ರ ಸಂಪೂರ್ಣ ಸಿದ್ದವಾಗಿದ್ದು ಶೀಘ್ರವೇ ತೆರೆಗೆ ಬರಲಿದೆ.

ಹೆಸರೇ ಸೂಚಿಸುವಂತೆ ಮಾವುತ ಹಾಗೂ ಆನೆಯ ಭಾಂದವ್ಯದ ಕಾಡಿನ ಕಥಾ ಹಂದರವುಳ್ಳ ಚಿತ್ರ. ಈ ಚಿತ್ರವು ಈಗಾಗಲೇ ಶಿವಮೊಗ್ಗದ ಸಕ್ರೆಬೈಲು ಅರಣ್ಯ, ಹೊಸ ನಗರದ ಶ್ರೀ ರಾಮಚಂದ್ರಪುರ ಮಠ, ನಿಟ್ಟೂರು ಹಾಗೂ ಸುತ್ತ ಮುತ್ತ 45 ದಿನಗಳ ಕಾಲ ಚಿತ್ರೀಕರಿಸಲಾಗಿದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸ ಮುಗಿಸಿ ನವೆಂಬರ್ ತಿಂಗಳಲ್ಲಿ ತೆರೆಗೆ ಬರಲು ಸಜ್ಜಾಗಿದ್ದಾನೆ.



ಸಕ್ರೆಬೈಲಿನ "ಸಾಗರ್" ಎಂಬ ಆನೆಯು ನಟಿಸಿರುವುದು ಈ ಚಿತ್ರದ ವಿಶೇಷ. ಚಿತ್ರ–ಕ್ಕೆ ಲಕ್ಷ್ಮೀಪತಿ ಬಾಲಾಜಿ ಬಂಡವಾಳ ಹಾಕುವುದರೊಂದಿಗೆ ನಾಯಕ ನಟನಾಗಿ ಅಭಿನಯಿಸಿದ್ದು, ಸಹ ನಿರ್ಮಾಪಕರಾಗಿ ಮುರುಳಿಧರ ತಿಪ್ಪುರ್, ಚಲುವರಾಜ್ ಎನ್ ಅವರು ಸಾಥ್ ಕೊಟ್ಟಿದ್ದಾರೆ.

ರವಿಶಂಕರನಾಗ್ ರವರು ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ, ಸಾಹಿತ್ಯ ಬರೆದು ನಿರ್ದೇಶನ ಹೊಣೆ ಹೊತ್ತಿದ್ದಾರೆ. ಛಾಯಾಗ್ರಾಹಕ ವೀನಸ್ ಮೂರ್ತಿಯವರು ಅದ್ಭುತ ಕೈಚಳಕ ತೋರಿದ್ದು, ವಿನು ಮನಸುರವರ ಸಂಗೀತದಲ್ಲಿ ನಾಲ್ಕು ಹಾಡುಗಳು ಅದ್ದೂರಿಯಾಗಿ ಮೂಡಿ ಬಂದಿವೆ, ರವಿವರ್ಮ ಹಿನ್ನೆಲೆ ಸಂಗೀತ ಸೊಗಸಾಗಿದೆ. ವೆಂಕಿ ಯು.ಡಿ.ವಿ ಸಂಕಲನ, ಕಮಲ್ ಗೋಯಲ್ ಡಿಐ, ಅಕ್ಷಯ್ ಅವರ ಸಿ.ಜಿ ಕಾರ್ಯ ಹಾಗೂ ಥ್ರಿಲ್ಲರ್ ಮಂಜು ಸಾಹಸ ಸಂಯೋಜನೆಯಲ್ಲಿ ಚಿತ್ರವು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಪಿ.ಆರ್.ಓ ಸುಧೀಂದ್ರ ವೆಂಕಟೇಶ, ಡಾ, ಯ, ಪ್ರಭು ಗಂಜಿಹಾಳ, ಡಾ, ವೀರೇಶ ಹಂಡಿಗಿ ಅವರಾಗಿದ್ದಾರೆ.

ಚಿತ್ರದ ತಾರಾಬಳಗದಲ್ಲಿ ಲಕ್ಷ್ಮೀಪತಿ ಬಾಲಾಜಿ, ಮಹಾಲಕ್ಷ್ಮಿ, ದಿವ್ಯಶ್ರೀ, ಥ್ರಿಲರ್ಮಂಜು, ಪದ್ಮವಾಸಂತಿ, ಬಲರಾಜ್ವಾಡಿ, ಲಯಕೋಕಿಲ,ನಂಜುಸಿದ್ದಪ್ಪ,ಕೈಲಾಶ್‌ಕುಟ್ಟಪ್ಪ, ಮೈಸೂರ್ ಸುಂದರ್, ಮೈಸೂರ್ ಮಂಜುಳ ಮೊದಲಾದವರು ಅಭಿನಯಿಸಿದ್ದಾರೆ.

**– ಡಾ, ಪ್ರಭು ಗಂಜಿಹಾಳ**
**ಮೊ–9448775346**

## "ಬೆಳಕಿನ ಹಬ್ಬ ದೀಪಾವಳಿ"




ದೀಪಜ್ಯೋತಿಃ ಪರಬ್ರಹ್ಮ
ದೀಪಜ್ಯೋತಿರ್ಜನಾರ್ದನಃ
ದೀಪೋ ಹರತು ಮೇ ಪಾಪಂ ದೀಪಜ್ಯೋತಿರ್ನಮೋಸ್ತುತೇ
ದೀಪಾವಳಿ ಹಬ್ಬದ ಶುಭಾಶಯಗಳು

ಮಣ್ಣಿನಿಂದ ಮಾಡಿದ ದೀಪಗಳಿಂದ
ಎಣ್ಣೆಯಲ್ಲಿ ಅದ್ದಿದ ಹತ್ತಿಯ ಬತ್ತಿಯಿಂದ
ಕತ್ತಲೆಯ ಮೇಲೆ ಬೆಳಕಿನ ವಿಜಯ ಸಂಕೇತದ
ಹಬ್ಬವನ್ನು ಆಚರಿಸೋಣ ದೀಪಗಳನ್ನು ಬೆಳಗುವುದರಿಂದ

ಮಿನುಗುವ ದೀಪಗಳು, ಬೆರಗುಗೊಳಿಸುವ ಪಟಾಕಿಗಳ ಹಬ್ಬ
ಕತ್ತಲೆಯ ಮೇಲೆ ಪ್ರೀತಿಯನ್ನು ಎತ್ತಿ ಹಿಡಿಯುವ ಹಬ್ಬ
ಸುತ್ತಲಿನ ಎಲ್ಲರೊಂದಿಗೆ ಸಂತೋಷವನ್ನು ಹಂಚಿಕೊಳ್ಳುವ ಹಬ್ಬ
ಎಲ್ಲರ ಮನೆ, ಮನದಲ್ಲೂ ಬೆಳಕನ್ನು ಮೂಡಿಸುವ ಹಬ್ಬ

ದೀಪಗಳಂತೆ ನಮ್ಮ ಜೀವನವು ಸದಾ ಬೆಳಗುತ್ತಿರಲಿ
ದೀಪಗಳ ಬೆಳಕಿನಲ್ಲಿ ಕತ್ತಲು ಕರಗುವಂತೆ ಕಷ್ಟಗಳು ಕರಗಲಿ
ದೀಪದ ಹೊಳಪಿನಂತೆ ಜೀವನಪೂರ್ತಿ ಸಂತೋಷ ತುಂಬಿರಲಿ
ಸಮೃದ್ಧಿ ಶಾಂತಿ ಆರೋಗ್ಯದ ಬೆಳಕನ್ನು ಮೂಡಿಸಲಿ

ಜೀವಮಾನವಿಡೀ ಉಳಿಯುವ ಕ್ಷಣಗಳನ್ನು ಸೃಷ್ಟಿಸೋಣ
ದೀಪದ ಬೆಳಕಿನಲ್ಲಿ ಪ್ರೀತಿಯ ದೀಪ ಬೆಳಗಿಸೋಣ
ಸವಿನುಡಿಯ ತೈಲದ ಜೊತೆ ಬಾಳಿನ ಪ್ರಣತಿ ಬೆಳಗೋಣ
ನಿಸ್ವಾರ್ಥದ ಜ್ಯೋತಿಯ ಬೆಳಕು ಮೂಡಿಸೋಣ

**– ಕು. ಜ್ಯೋತಿ ಆನಂದ ಚಂದುಕರ**
**ಬಾಗಲಕೋಟ**

# ಆತ್ಮ ನಿರ್ಭರ ಭಾರತ್ ಸಂಕಲ್ಪ ಅಭಿಯಾನ



**ರಬಕವಿ–ಬನಹಟ್ಟಿ :** ಸಪ್ಟೆಂಬರ್ 25 ರಂದು ಪಂಡಿತ ದೀನದಯಾಳ್ ಉಪಾಧ್ಯೆ ಅವರ ಜನ್ಮ ದಿನದಿಂದ ಡಿಸೆಂಬರ್ 25 ರವರೆಗೆ ಅಟಲ್ ಬಿಹಾರಿ ವಾಜಪೇಯಿಯವರ ಜನ್ಮ ದಿನದವರೆಗೆ ರಾಷ್ಟ್ರ ಮತ್ತು ರಾಜ್ಯದಲ್ಲಿ ಆತ್ಮ ನಿರ್ಭರ ಭಾರತ ಸಂಕಲ್ಪ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಅವರು ಮಂಗಳವಾರ ಇಲ್ಲಿನ ಭಾರತೀಯ ಜನತಾ ಪಕ್ಷದ ಕಾರ್ಯಾಲಯದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ, ರಾಜ್ಯ, ಜಿಲ್ಲಾ ಮತ್ತು ಮಂಡಲ ಹಂತದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗುವುದು.

"ಹರ್ ಘರ್ ಸ್ವದೇಶಿ" ಕಾರ್ಯಕ್ರಮದ ಅಂಗವಾಗಿ ಭಾರತೀಯ ಜನತಾ ಪಕ್ಷದ ಕಾರ್ಯಕರ್ತರು ಮನೆ ಮನೆಗೆ ತೆರಳಿ ದೇಸಿ ವಸ್ತುಗಳನ್ನು ಬಳಸುವಂತೆ ಜಾಗೃತಿ ಮೂಡಿಸಲಿದ್ದಾರೆ. ನಾವು ದೇಸಿ ವಸ್ತುಗಳನ್ನು ಬಳಸುವುದರಿಂದ ಆರ್ಥಿಕವಾಗಿ ಸಬಲರಾಗುತ್ತೇವೆ ಮತ್ತು ಶಕ್ತಿವಂತರಾಗುತ್ತೇವೆ. ವೋಕಲ್ ಫಾರ್ ಲೋಕಲ್ ಎಂಬ ಸಂದೇಶವನ್ನು ಕೂಡಾ ಸಾರುತ್ತೇವೆ. ಭವಿಷ್ಯದಲ್ಲಿ ಭಾರತವು ವಿಕಸಿತ ಭಾರತವಾಗುತ್ತದೆ. ಇದು ನಮ್ಮ ಉದ್ದೇಶವಾಗಿದೆ. ಅದರಲ್ಲೂ ದೀಪಾವಳಿಯ ಸಂದರ್ಭದಲ್ಲಿ ದೇಸಿ ವಸ್ತುಗಳನ್ನು ಖರೀದಿಸಬೇಕು. ಆತ್ಮ ನಿರ್ಭರ ಭಾರತ ಯೋಜನೆ ಅಡಿಯಲ್ಲಿ ಚಿತ್ರಕಲಾ, ಕವಿತೆ ರಚನೆ, ರಂಗೋಲಿ ಸೇರಿದಂತೆ ಹಲವಾರು ಸ್ಪರ್ಧೆಗಳನ್ನು ಹಾಗೂ ಬೀದಿ ನಾಟಕ, ಗೋಡೆ ಬರಹಗಳನ್ನು ಕೂಡಾ ಕೈಗೊಳ್ಳಲಾಗುವುದು ಎಂದು ಶಾಸಕ ಸಿದ್ದು ಸವದಿ ತಿಳಿಸಿದರು.

ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಪದಾಧಿಕಾರಿಗಳಾದ ಶ್ರೀಶೈಲ ಬೀಳಗಿ, ಸುರೇಶ ಅಕ್ಕಿವಾಟ, ಆನಂದ ಕಂಪು, ಶಂಕರ ಹುನ್ನೂರ, ನಿಂಗರಾಜ ನಾಯಕ, ಸದಾಶಿವ ಪರೀಟ, ಪ್ರವೀಣ ಧಬಾಡಿ ಮತ್ತು ರವಿ ಕೊರ್ತಿ ಭಾಗವಹಿಸಿದ್ದರು.

# ಲೋಕಾಪುರ–ಧಾರವಾಡ ಹೊಸ ರೈಲು ಮಾರ್ಗಕ್ಕೂ ಭೂಮಿ ನೀಡಲು ಸಿಎಂ ಭರವಸೆ

**ರಬಕವಿ–ಬನಹಟ್ಟಿ:**ಬಾಗಲಕೋಟ – ಕುಡಚಿ ರೈಲು ಮಾರ್ಗದ ಕಾಮಗಾರಿ ತೀವ್ರ ಗತಿಯಲ್ಲಿ ನಡೆದಿದ್ದು, ಲೋಕಾಪುರ ಸ್ಟೇಷನ್ ಕಾಮಗಾರಿ ಸಂಪೂರ್ಣ ಮುಗಿದಿದೆ. ಲೋಕಾಪುರ–ಧಾರವಾಡಹೊಸರೈಲುಮಾರ್ಗಕ್ಕೆ ಕೇಂದ್ರ ಸರ್ಕಾರ ಅನುಷ್ಠಾನಕ್ಕೆ ತಂದರೆ ರಾಜ್ಯ ಸರ್ಕಾರದಿಂದ ನಾವು ಭೂಮಿ ನೀಡುತ್ತೇವೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಭರವಸೆ ನೀಡಿದರು.



ಸೋಮವಾರ ತಾಲೂಕಿನ ಬಂಡಿಗಣಿಲಮಾಣಿಕಮಠದಲ್ಲಿ ಹಮ್ಮಿಕೊಂಡ ಸರ್ವಧರ್ಮ ಸಂಗಮ ಸಮಾರಂಭದ ನಂತರ ಬಾಗಲಕೋಟ ಕುಡಚಿ ರೈಲು ಮಾರ್ಗ ನಿರ್ಮಾಣ ಹೋರಾಟ ಸಮಿತಿ ಅಧ್ಯಕ್ಷ ಕುತುಬುದ್ದಿನ ಖಾಜಿ ನೀಡಿದ ಮನವಿಗೆ ಸ್ಪಂದಿಸಿ ಮಾತನಾಡಿದರು.

ನಂತರ ಹೋರಾಟ ಸಮಿತಿ ಅಧ್ಯಕ್ಷ ಖಾಜಿ ಮಾತನಾಡಿ, ಕುಡಚಿ ಮಾರ್ಗ ಕಳೆದ ದಶಕ ದಿಂದ ಕುಂಟುತ್ತಾ ಸಾಗಿದೆ. ಇನ್ನು ಅಲ್ಪ ಭೂಮಿ ಒದಗಿಸುವ ಅವಶ್ಯಕತೆ ಇದ್ದು ಸರ್ಕಾರ ಗಂಭೀರವಾಗಿ ಪರಿಗಣಿಸಿ ರಬಕವಿ–ಬನಹಟ್ಟಿ , ತೇರದಾಳ , ಹಾರೂಗೇರಿ ಕ್ರಾಸ್, ಕುಡಚಿವರೆಗೆ ಪೂರ್ತಿ ಕಾಮಗಾರಿ ಪ್ರಾರಂಭಿಸಲು ಅನುಕೂಲ ಮಾಡಿ ಕೊಡಬೇಕು ಎಂದು ಒತ್ತಾಯ ಮಾಡಿದರು. ಇದಕ್ಕೆ ಸಿ.ಎಂ. ಸ್ಪಂದಿಸಿದರು.

ಅದರಂತೆ ಲೋಕಾಪುರ ಧಾರವಾಡ ಹೊಸ ರೈಲು ಮಾರ್ಗ ಯಲ್ಲಮ್ಮನ ಭಕ್ತರ ಅನುಕೂಲಕ್ಕೆ ಕೇಂದ್ರದ ಪ್ರಸ್ತಾವನೆಯಲ್ಲಿದ್ದು, ರಾಜ್ಯ ಸರ್ಕಾರದಿಂದ ಭೂಮಿ ನೀಡುವ ಭರವಸೆ ಪತ್ರ ಕೇಂದ್ರ ಸರ್ಕಾರಕ್ಕೆ ಕಳಿಸಬೇಕು ಎಂದು ಕುತುಬುದ್ದಿನ ಖಾಜಿ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಿಕೊಂಡರು. ಅದಕ್ಕೂ ಕೂಡಾ ಸ್ಪಂದಿಸಿ ಭರವಸೆ ನೀಡಿದರು.

ಈ ಸಂದರ್ಭದಲ್ಲಿ ರೈತ ನಾಯಕ ಸುಭಾಸ ಶಿರಬೂರ, ಶ್ರೀನಿವಾಸ ಬಳ್ಳಾರಿ, ಬಸವರಾಜ ಕೊಕಟನೂರ, ಹೊಳಬಸು ಶೆಟ್ಟರ, ಮೈನುದ್ದಿನ ಖಾಜಿ, ಡಾ. ರವಿ ಜಮಖಂಡಿ, ರವಿ ಗಡಾದ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ದಾಸರಟ್ಟಿ ಶಾಲೆಯ ನೂತನ ಕೊಠಡಿಗೆ ಕೊನೆಗೂ ಅನುದಾನ ಬಂತು !

**ತೇರದಾಳ :** ಯಾವುದೇ ಸ ' ರ ' ಕ ಾ ರ ' ವಿ ರ ' ಲಿ , ಜನಪ್ರತಿನಿಧಿಗಳಿರಲಿ ಶೈಕ್ಷಣಿಕ ಪ್ರಗತಿಗೆ ಪಕ್ಷಾತೀತವಾಗಿ ನಡೆದುಕೊಳ್ಳಬೇಕು. ಆಗಲೇ ಹಿಂದುಳಿದ ಸಮುದಾಯದಿಂದ ಹಿಡಿದು ಪ್ರತಿಯೊಬ್ಬರೂ ಆರ್ಥಿಕವಾಗಿ ಮುಂದೆ ಬರಲು ಸಾಧ್ಯ ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಇಲ್ಲಿನ ದಾಸರಟ್ಟಿಯಲ್ಲಿನ ಸರಕಾರಿ ಎಲ್ಪಿಎಸ್ ಶಾಲೆಯಲ್ಲಿ 14.5 ಲಕ್ಷ ರೂ. ವೆಚ್ಚದಲ್ಲಿ ನೂತನ ಕೊಠಡಿ ನಿರ್ಮಾಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕ್ಷೇತ್ರದಲ್ಲಿ ಶಿಥಲಗೊಂಡಿರುವ ಶಾಲೆಗಳ ಕುರಿತು ಸಿಆರ್ಪಿಗಳು ಸರಿಯಾಗಿ ಮತ್ತು ಅವಶ್ಯವಿರುವ ಕಡೆಗೆ ಬಿಇಓ ಅವರಿಗೆ ಮಾಹಿತಿ ನೀಡಬೇಕು. ಕೊಳಚೆ ಪ್ರದೇಶ ಹಾಗೂ ಹಿಂದುಳಿದ ಸಮುದಾಯಗಳ ಮಕ್ಕಳು ಓದುವ ಶಾಲೆಗಳಿಗೆ ಮೊದಲು ಆದ್ಯತೆ ನೀಡಬೇಕು.

ಬರುವ ದಿನಗಳಲ್ಲಿ ಶಾಲೆಯ ಅಭಿವೃದ್ಧಿಗೆ ತಾವು ಕೈಜೋಡಿಸುವುದಾಗಿ ಭರವಸೆ ನೀಡಿದರು. ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಮಾತನಾಡಿ, ದಾಸರಟ್ಟಿ ಶಾಲೆಯ ಸ್ಥಿತಿಯನ್ನು ನೋಡಿ ತನಗೆ ಬಹಳಷ್ಟು ಆತಂಕವಾಗಿತ್ತು. ಉಭಯ ಶಾಸಕರು ಸರಕಾರದ ಮೇಲೆ ಒತ್ತಡ ಹೇರಿ ಅನುದಾನ ಬಿಡುಗಡೆ ಮಾಡಿಸಿದ್ದೇವೆ. ತೇರದಾಳ ಜನತೆಯ ಬಹುದಿನಗಳ ಬೇಡಿಕೆಯಾಗಿದ್ದ ಸರಕಾರಿ ಪ್ರೌಢಶಾಲೆ ಮಂಜೂರಾಗಿದ್ದು, ಶೀಘ್ರದಲ್ಲಿ ಪ್ರಾರಂಭಗೊಳಿಸುವ ಕೆಲಸ ಇಲಾಖೆ ಮಾಡಲಿದೆ ಎಂದು ಹೇಳಿದ ಅವರು, ದೇವರಾಜ ನಗರದ ಎಚ್ಪಿಎಸ್ ಹಾಗೂ ದಾಸರಟ್ಟಿ ಶಾಲೆಯ ಕಂಪೌಂಡ ಹಾಗೂ ಶೌಚಾಲಯ ನಿರ್ಮಾಣ–ಕ್ಕೆ ಹತ್ತು ಲಕ್ಷ ರೂ. ಅನುದಾನ ನೀಡಲು ಶಿಪಾರಸ್ಸು ಮಾಡಲಾಗಿದೆ ಎಂದು ತಿಳಿಸಿದರು. ಬಿಇಓ ಎ. ಕೆ. ಬಸಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿದರು. ವಾರ್ಡ್ ಸದಸ್ಯ ಶೆಟ್ಟೆಪ್ಪ ಸುಣಗಾರ ಮಾತನಾಡಿದರು. ಎಸ್.ಡಿ. ಎಂ.ಸಿ. ಅಧ್ಯಕ್ಷ ಯಲ್ಲಪ್ಪ ಬೋಧೆನ್ನವರ, ಬಿಜೆಪಿ ನಗರ ಘಟಕ ಅಧ್ಯಕ್ಷ ಮಹಾವೀರ ಕೊಕಟನೂರ, ಕಾಂಗ್ರೆಸ್ ಅಧ್ಯಕ್ಷ ಅಶೋಕ ಆಳಗೊಂಡ, ಗ್ಯಾರಂಟಿ ಸಮಿತಿ ಅಧ್ಯಕ್ಷ ನೇಮಣ್ಣ ಸಾವಂತನವರ, ಕವಿತಾ ಕೊಣ್ಣೂರ, ಗೌತಮ ರೋಡಕರ, ರಾಜೇಸಾಬ ನಗಾರ್ಜಿ, ದಶರಥ ಅಕ್ಕೆನ್ನವರ, ರಮೇಶ ಧರೆನ್ನವರ, ಶಿಕ್ಷಣ ಇಲಾಖೆಯ ಬಿ. ಎಂ. ಹಳೇಮನಿ, ಎ. ಆರ್. ಮುಧೋಳ, ಅಪ್ಪು ಮಂಗಸೂಳಿ, ಹನಮಂತ ರೋಡನ್ನವರ, ಅಲ್ಲಪ್ಪ ಬಾಬಗೊಂಡ, ಶಂಕರ ಕುಂಬಾರ, ಲಕ್ಷ್ಮಣ ನಾಯಕ, ಆದಿನಾಥ ಸಪ್ತಸಾಗರ, ಪಿ. ಎಸ್. ಮಾಸ್ತಿಸೇ–ರಿದಂತೆ ಇನ್ನಿತರರು ಉಪಸ್ಥಿತ–ರಿದ್ದರು.



# ಯಶಸ್ವಿ ಒಂಬತ್ತನೇ ವರ್ಷದ ಪಂಡರಪುರ ಪಾದಯಾತ್ರೆಗೆ ಪ್ರಯಾಣ

**ಇಳಕಲ್ :** ಶ್ರೀ ಮಹಾಂತೇಶ ಚಿತ್ರ ಮಂದಿರ ಹತ್ತಿರ ಶ್ರೀ ರುಕ್ಮಿಣಿ ಪಾಂಡುರಂಗ ದೇವಸ್ಥಾನದಿಂದ ಪಾಂಡವಪುರಕ್ಕೆ ಪಾದಯಾತ್ರೆ ಮೂಲಕ ಪಯಣ ಬೆಳೆಸಿದರು. ಒಂಬತ್ತನೇ ವರ್ಷದ ಪಾದಯಾತ್ರೆ ಇಂದು ಪಂಡರಪುರಕ್ಕೆ ಸಂತ ಭಕ್ತ ಮಂಡಳಿ ನೂರಾರು ಸಂತರೊಂದಿಗೆ ಪಾದಾರ್ಪಣೆ, ಪ್ರಾರಂಭವಾಯಿತು. ಸಂತರಾದ ನಾಗಪ್ಪ ಸಂತರು ಜಡಿಯಪ್ಪ ಸಂತರು,ವೀಣಾ ಕರೀ ಆದ ಶ್ರೀ ನಿಂಗಪ್ಪ ಗೂಳಿ, ಹಲವು ಸಂತರು ಪಾದಯಾತ್ರೆ ಕೈಗೊಂಡರು.ಶಿಕ್ಷಕ ಶ್ರೀಧರಜೋಗಿನಹಾಗೂಗೆಳೆಯರು ಸಂತರಿಗೆ ಶುಭ ಹಾರೈಸಿದರು.



# ನಗರ ಸೌಂದರ್ಯದ ಅಭಿವೃದ್ಧಿ ಕಾಮಗಾರಿ



**ಬನಹಟ್ಟಿ :** ನಗರದ ವೈಭವ ಚಿತ್ರ ಮಂದಿರದಿಂದ ನೂಲಿನ ಗಿರಣಿಯವರೆಗೆ ಬೀದಿ ದೀಪಗಳನ್ನು ಅಳವಡಿಸುವುದು ಮತ್ತು ರಬಕವಿಯಲ್ಲಿ ಕೆಲವು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದು ರಬಕವಿ ಬನಹಟ್ಟಿ ನಗರಸಭೆಯ ಅಧ್ಯಕ್ಷೆ ವಿದ್ಯಾ ಧಬಾಡಿ ತಿಳಿಸಿದರು.

ಅವರು ಮಂಗಳವಾರ ನಗರಸಭೆಯ ಸಭಾ ಭವನದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದರು.

2021 ರಿಂದ 2024 ರವರೆಗೆ ರಾಜ್ಯ ಹಣಕಾಸು ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮುಕ್ತ ನಿಧಿ ಕಾಮಗಾರಿ ಮತ್ತು 15ನೇ ಹಣಕಾಸು ಯೋಜನೆಯ ಅನಟೈಡ್ ಮತ್ತು ಟೈಡ್ ಅನುದಾನದಲ್ಲಿ ಉಳಿತಾಯವಾದ ರೂ. 87 ಲಕ್ಷ ಹಣವನ್ನು ನಗರದ ಅಭಿವೃದ್ಧಿಗೆ ಬಳಸಿಕೊಳ್ಳಲಾಗುವುದು. ನಗರಗಳ ಅಭಿವೃದ್ಧಿಗಾಗಿ ಪ್ರತಿಯೊಬ್ಬರ ಸಹಕಾರ ಕೂಡಾ ಮುಖ್ಯವಾಗಿದೆ ಎಂದು ವಿದ್ಯಾ ಧಬಾಡಿ ತಿಳಿಸಿದರು.

ನಗರಸಭೆಯ ಉಪಾಧ್ಯಕ್ಷೆ ದೀಪಾ ಗಾಡಿವಡ್ಡರ, ಪೌರಾಯುಕ್ತ ರಮೇಶ ಜಾಧವ ನಗರಸಭೆಯ ಸಿಬ್ಬಂದಿ ಮತ್ತು ಸದಸ್ಯರಾದ ಶ್ರೀಶೈಲ ಬೀಳಗಿ, ಪ್ರಭಾಕರ ಮೋಳೆದ,

ಸಂಜಯ ತೆಗ್ಗಿ, ಯಲ್ಲಪ್ಪ ಕಟಗಿ, ಗೌರಿ ಮಿಳ್ಳಿ, ಅರುಣ ಬುದ್ನಿ, ಶಶಿಕಲಾ ಸಾರವಾಡ, ಜಯಶ್ರೀ ಬಾಗೇವಾಡಿ, ಶಿವಾನಂದ ಬುದ್ನಿ ಸೇರಿದಂತೆ ಇನ್ನೂ ಅನೇಕರು ಪಾಲ್ಗೊಂಡಿದ್ದರು.

# ಉದ್ಯಾನ ನಿರ್ಮಾಣಕ್ಕೆ ಭೂಮಿಪೂಜೆ



**ಕೊಪ್ಪಳ :** ತಾಲ್ಲೂಕಿನ ಹಾಲವರ್ತಿ ಗ್ರಾಮದಲ್ಲಿ ಸ್ಥಳೀಯ ಗ್ರಾಮ ಪಂಚಾಯಿತಿ ಹಾಗೂ ಎಂಎಸ್‌ಪಿಎಲ್ ಕಂಪನಿಯ ಸಿಎಸ್‌ಆರ್ ಚಟುವಟಿಕೆಯ ಭಾಗವಾಗಿ ಉದ್ಯಾನ ನಿರ್ಮಾಣದ ಭೂಮಿಪೂಜೆ ಕಾರ್ಯಕ್ರಮ ನೆರವೇರಿತು.

ಎಂಎಸ್‌ಪಿಎಲ್‌ನ ಸಿಎಸ್‌ಆರ್ ವಿಭಾಗದ ಉಪಾಧ್ಯಕ್ಷ ಎಚ್. ಕೆ. ರಮೇಶ್ ಮಾತನಾಡಿ ವೇಗದ ಬದುಕಿನಲ್ಲಿ ಪ್ರಕೃತಿಯೊಡನೆ ನಮ್ಮ ನಂಟು ನಿಧಾನವಾಗಿ ಕಡಿಮೆಯಾಗುತ್ತಿದೆ.

ಆದ್ದರಿಂದ ಪರಿಸರದ ಸಂರಕ್ಷಣೆ ಕೇವಲ ಕರ್ತವ್ಯವಲ್ಲ, ಅದು ಮುಂದಿನ ಪೀಳಿಗೆಗಾಗಿ ನಮ್ಮ ನೈತಿಕ ಜವಾಬ್ದಾರಿಯಾಗಿದೆ' ಎಂದರು.

ಗ್ರಾಮಸ್ಥರ ಅನೇಕ ವರ್ಷಗಳ ಆಸೆಯಂತೆ ಹಾಲವರ್ತಿಯಲ್ಲಿ ಸುಸಜ್ಜಿತ ಉದ್ಯಾನ ನಿರ್ಮಾಣಕ್ಕಾಗಿ

ನಮ್ಮ ಸಂಸ್ಥೆ ನೆರವಾಗಿದೆ.

ಹಿರಿಯರು ಉದ್ಯಾನದಲ್ಲಿ ಬೆಳಗಿನ ನಡಿಗೆ ಮೂಲಕ ಆರೋಗ್ಯ ಕಾಪಾಡಿಕೊಳ್ಳಬಹುದು, ಮಕ್ಕಳು ಆಟದ ಮೈದಾನದಲ್ಲಿ ಸಂತೋಷದಿಂದ ಸಮಯ ಕಳೆಯಬಹುದು, ಯುವಕರು ಕ್ರೀಡೆ ಮತ್ತು ವ್ಯಾಯಾಮದ ಮೂಲಕ ಶಕ್ತಿಯುತ ಜೀವನಕ್ಕೆ ಪ್ರೇರಣೆಯಾಗಬಹುದು' ಎಂದು ಹೇಳಿದರು.

ಕಂಪನಿಯ ಘಟಕದ ಮುಖ್ಯಸ್ಥ ವೀರೇಶ್, ಎಜಿಎಂ ಪ್ರವೀಣ್ ಮನು, ರವಿ ಬಿಸಗುಪ್ಪಿ, ವಿಠ್ಠಲ ಸಲಗರ, ಎಚ್ ಆರ್, ಲೋಹಿತ್, ಆನಂದ್ ಕಿನ್ನಾಳ, ಮಹೇಂದ್ರ ಹಾಲವರ್ತಿ, ಸಿಂದಗಪ್ಪ ಹೊಸಳ್ಳಿ, ಮುದಿಯಪ್ಪ ಆದೋನಿ, ಗುರುಸಿದ್ದಪ್ಪ, ದ್ಯಾಮಣ್ಣ ಹೊಸಳ್ಳಿ, ಹನುಮಂತ ಗೊರವರ, ಗವಿಸಿದ್ದಾರೆಡ್ಡಿ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ದೇಹದ ಬೆಳವಣಿಗೆಗೆ ಪೌಷ್ಟಿಕ ಆಹಾರ ಮುಖ್ಯ: ನ್ಯಾ. ದರಗದ

**ಕೊಪ್ಪಳ :** ಪೌಷ್ಟಿಕ ಆಹಾರವನ್ನು ಕ್ರಮಬದ್ದವಾಗಿ ಸೇವನೆ ಮಾಡಬೇಕು. ದೇಹದ ಸರ್ವಾಂಗೀಣ ಅಭಿವೃದ್ಧಿಗೆ ಪೌಷ್ಟಿಕ ಆಹಾರ ಸೇವನೆ ತುಂಬಾ ಮುಖ್ಯ. ಆಹಾರದಲ್ಲಿ ವೈವಿಧ್ಯತೆ ಕಂಡುಕೊಳ್ಳಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ನ್ಯಾ. ಮಹಾಂತೇಶ ದರಗದ ಅವರು ಹೇಳಿದರು.



ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ, ಕೊಪ್ಪಳ ಇವರ ಸಂಯುಕ್ತಾಶ್ರದಲ್ಲಿ ಸೋಮವಾರದಂದು ಕೊಪ್ಪಳ ಯೋಜನೆಯ ಭಾಗ್ಯನಗರದ ಅಂಬೇಡ್ಕರ್ ಸಮುದಾಯ ಭವನದಲ್ಲಿ 8ನೇ ರಾಷ್ಟ್ರೀಯ ಪೋಷಣ್ ಮಾಸಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ಸಮಾರೋಪ ಕಾರ್ಯಕ್ರಮವನ್ನು ಹಾಗೂ ಅಂತರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪಟ್ಟಣ ಪಂಚಾಯತಿ ಉಪಾಧ್ಯಕ್ಷ ಹೊನ್ನೂರುಸಾಬ ಭೈರಾಪುರ ಅವರು ಮಾತನಾಡಿ, ಮಕ್ಕಳು ಮತ್ತು ಮಹಿಳೆಯರು ಸಧೃಡವಾಗಿ ಮತ್ತು ಆರೋಗ್ಯವಾಗಿದ್ದರೆ ದೇಶದ ನಿರ್ಮಾಣ ಮಾಡಬಹುದು. ಜಂಕ್‌ಫುಡ್ ನಿರಾಕರಣೆ ಮಾಡಲು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾಗ್ಯನಗರ ಪಟ್ಟಣ ಪಂಚಾಯತ್ ಅಧ್ಯಕ್ಷ ತುಕಾರಾಮಪ್ಪ ಗಡಾದ, ಭಾಗ್ಯನಗರ ಪ.ಪಂ. ಮುಖ್ಯಾಧಿಕಾರಿ ಸುರೇಶ ಬಬಲಾದ, ಶಿವಶರಣಪ್ಪ ಗದ್ದಿ ಮತ್ತು ರೂಪ ಗಂಧದ, ಭಾಗ್ಯನಗರ ವಲಯದ ಮೇಲ್ವಿಚಾರಕಿ ರೋಜಾ ಆಶಾ ಕಾರ್ಯಕರ್ತೆಯರು ಹಾಗೂ ಸಹಾಯಕರು,

ಕಾರ್ಯಕ್ರಮದ ರೂವಾರಿಗಳಾದ ಗರ್ಭಿಣಿಯರು, ಬಾಣಂತಿಯರು, ತಾಯಂದಿರು, ಮುದ್ದು ಮಕ್ಕಳು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಸೀಮಂತ, ಅನ್ನಪ್ರಾಶನ ಕಾರ್ಯಕ್ರಮ ಹಾಗೂ ವೇಷಭೂಷಣ ಸ್ಪರ್ಧೆ ಏರಿಪಡಸಲಾಗಿತ್ತು.

# ಜನಸಾಮಾನ್ಯರು, ಗುತ್ತಿಗೆದಾರರಿಗೆ ಸಮಸ್ಯೆ ಮಾಡುವುದು ಸರಿಯಲ್ಲ: ಕ್ಯಾವಟರ್

**ಕೊಪ್ಪಳ :** 'ಪ್ರೇರಣಾ ಸಂಸ್ಥೆಯ ಮೂಲಕ ಸಂಸದ ರಾಜಶೇಖರ ಹಿಟ್ನಾಳ ಕ್ರಷರ್ ಉದ್ಯಮ ಹಿಡಿತಕ್ಕೆ ತೆಗೆದುಕೊಂಡು ಜನಸಾಮಾನ್ಯರು ಹಾಗೂ ಗುತ್ತಿಗೆದಾರರಿಗೆ ಸಮಸ್ಯೆ ಮಾಡುತ್ತಿದ್ದಾರೆ. ಅವರ ಈ ನಡೆ ಸರಿಯಲ್ಲ' ಎಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ. ಬಸವರಾಜ ಕ್ಯಾವಟರ್ ಹೇಳಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು 'ಜನ ಮತ ಚಲಾಯಿಸಿ, ತಮಗೆ ನೀಡಿರುವ ಅಧಿಕಾರವನ್ನು ಜನರ ಏಳಿಗೆಗೆಜನಪ್ರತಿನಿಧಿಯಾದವರು ಬಳಸಬೇಕು. ಆದರೆ, ಕೊಪ್ಪಳ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಸದ ರಾಜಶೇಖರ ಹಿಟ್ನಾಳ ಅವರು ಗ್ರಾಹಕರ ವಿರೋಧಿ ನೀತಿ ಆರಂಭಿಸುವ ಮೂಲಕ ಪ್ರಮುಖವಾಗಿ ಜನಸಾಮಾನ್ಯರಿಗೆಹೊರೆಯಾಗಿಸುವ ಕೆಲಸ



ಮಾಡುತ್ತಿದ್ದಾರೆ' ಎಂದಿದ್ದಾರೆ.

'ಈವರೆಗೆ 600ರಿಂದ 700ಕ್ಕೆ ದೊರೆಯುತ್ತಿದ್ದ ಜಲ್ಲಿ ಕಲ್ಲು ಸಂಸದರ ನಡೆಯಿಂದ ಇನ್ನು ಮುಂದೆ 1400ರಿಂದ 1500 ದುಬಾರಿ ಬೆಲೆ ತೆರಬೇಕಾಗಿದೆ. ಇದರಿಂದ ನೇರ ಪರಿಣಾಮ ಈ ಭಾಗದ ಬಡವರು, ಮಧ್ಯಮ ವರ್ಗದವರಿಗೆ ತಟ್ಟಲಿದೆ. ತಮ್ಮದೇ ಒಡೆತನದ ಪ್ರೇರಣಾ ಎನ್ನುವ ಸಂಸ್ಥೆ ಸ್ಥಾಪಿಸಿ, ಅದರ ಮೂಲಕ ಕ್ರಷರ್ ಉದ್ಯಮಿದಲ್ಲಿನ ಜಲ್ಲಿಕಲ್ಲು ಸೇರಿ ಪ್ರಮುಖ 8 ವಸ್ತುಗಳನ್ನು ಖರೀದಿ ಮಾಡುವ ನಿಯಮ ಹೇಳಿರುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನಿಸಿದ್ದಾರೆ.

ಇದನ್ನು ಸರಿಪಡಿಸಬೇಕು ಇಲ್ಲವಾದರೆ ಪಕ್ಷದ

ವತಿಯಿಂದ ಹೋರಾಟ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

# ಶೂ ಎಸೆಯಲು ಯತ್ನಿಸಿದ ವಕೀಲಗೆ ಶಿಕ್ಷೆ ನೀಡಲು ಆಗ್ರಹಿಸಿ ಪ್ರತಿಭಟನೆ




**ಗಂಗಾವತಿ :** ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂಎಸೆಯಲುಯತ್ನಿಸಿದಘಟನೆಖಂಡಿಸಿದಲಿತಪರ ಸಂಘಟನೆಗಳ ಒಕ್ಕೂಟದ ಸದಸ್ಯರು ಸೋಮವಾರ ಕೃಷ್ಣದೇವರಾಯ ವೃತ್ತದಲ್ಲಿ ಪ್ರತಿಭಟನೆ ನಡೆಸಿದರು.

ಮುಖ್ಯನ್ಯಾಯಮೂರ್ತಿ ಮೇಲೆ ವಕೀಲರೊಬ್ಬರು ಶೂ ಎಸೆಯಲು ಪ್ರಯತ್ನಿಸಿರುವುದು ಖಂಡನೀಯ. ಈ ಕೃತ್ಯ ಪ್ರಜಾಪ್ರಭುತ್ವ, ಸಂವಿಧಾನದ ಮೇಲೆ ದಾಳಿ ನಡೆಸಿದಂತಾಗಿದೆ. ಸರ್ಕಾರಗಳು ದಲಿತರ ಮೇಲೆ ನಡೆಯುವ ಕೃತ್ಯ, ಅಪಮಾನ, ಹಲ್ಲೆ ತಡೆಯಲು ಕಠಿಣ ಕಾನೂನು ಕ್ರಮಗಳು ರಚಿಸಬೇಕು. ಹಾಗೇ ತಪ್ಪಿತಸ್ಥರಿಗೆ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿದರು.

ಬಳಿಕ ತಹಶೀಲ್ದಾರ್ ಯು.ನಾಗರಾಜ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು.

ಈ ವೇಳೆ ಅಂಬೇಡ್ಕರ್ ದಲಿತ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಹುಲಗಪ್ಪ ಮಾಗಿ, ಬಿಎಸ್‌ಪಿ ಜಿಲ್ಲಾ ಮುಖಂಡ ಹುಲ್ಲೇಶ ದೇವರಮನಿ, ಡಿಎಸ್‌ಎಸ್ ವಿಭಾಗೀಯ ಸಂಚಾಲಕ ಹಂಪೇಶ ಹರಿಗೋಲು, ಮರಿಸ್ವಾಮಿ ಬರಗೂರು, ಹರೀಶ ಕೋರಿ, ಆಂಜನೇಯ ಸೋಮನಾಳ, ವಿರೇಶ ಆರ್ತಿ, ಅಂಬಣ್ಣ, ಹೊನ್ನುರಪ್ಪ ಢಣಾಪುರ ಸೇರಿ ಒಕ್ಕೂಟದ ಸದಸ್ಯರು ಉಪಸ್ಥಿತರಿದ್ದರು.

# ಭತ್ತಕ್ಕೆ 3,200 ಬೆಂಬಲ ಬೆಲೆ ನೀಡಲು ಆಗ್ರಹ

**ಕಾರಟಗಿ :** ಭತ್ತಕ್ಕೆ ಸ್ವಾಮಿನಾಥನ್ ಆಯೋಗದ

ವರದಿಯಂತೆ 3,200 ಬೆಂಬಲ ಬೆಲೆ ನೀಡಬೇಕು. ತಕ್ಷಣವೇ ಖರೀದಿ ಕೇಂದ್ರ ಆರಂಭಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಘಟಕ ಆಗ್ರಹಿಸಿ, ಕಂದಾಯ, ಜೆಸ್ಕಾಂ, ಪುರಸಭೆ, ಪೊಲೀಸ್ ಅಧಿಕಾರಿಗಳಿಗೆ ಸೋಮವಾರ ಪ್ರತಿಭಟನೆ ನಡೆಸಿ, ಮನವಿ ಸಲ್ಲಿಸಿದರು.

ಪಟ್ಟಣದ ಬಸ್ ನಿಲ್ದಾಣದ ಮುಂಭಾಗದಲ್ಲಿ ಪ್ರತಿಭಟನಾ ಸಭೆ ನಡೆಸಿದ ಸಂಘದ ಪದಾಧಿಕಾರಿಗಳು, ಸಾಂಕೇತಿಕವಾಗಿ ಪ್ರತಿಭಟನೆ ನಡೆಸಿ ಮನವಿ ಸಲ್ಲಿಸುತ್ತಿದ್ದೇವೆ. ಸೂಕ್ತ ಸ್ಪಂದನೆ ದೊರೆಯದಿದ್ದರೆ ಮುಂದೆ ಉಗ್ರವಾದ ಹೋರಾಟ ಮಾಡಲಾಗುವುದು ಎಂದರು.



ರೈತ ಸಂಘದ ರಾಜ್ಯಾಧ್ಯಕ್ಷ ಶರಣಪ್ಪ ದೊಡ್ಡಮನಿ ಮಾತನಾಡಿ,'ರೈತರು ಬೆಳೆ ಬೆಳೆಯಲು ಮಾಡುವ ಖರ್ಚು ಏರಿಕೆ ಕ್ರಮದಲ್ಲಿದ್ದರೆ, ಭತ್ತದ ಬೆಲೆ ಅದ–ಕ್ಕೆ ತಕ್ಕಂತೆ ಏರುತ್ತಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿದರು.

ಸಂಘದ ತಾಲ್ಲೂಕು ಅಧ್ಯಕ್ಷ ನಾರಾಯಣ ಈಡಿಗೇರ,'32/1–2ರ ನಾಲೆಯ ಪೈಪ್‌ನಲ್ಲಿ ತ್ಯಾಜ್ಯ ಸಂಗ್ರಹಗೊಂಡು ನೀರು ಹರಿಯುವಿಕೆ ಕ್ಷೀಣಿಸಿದ್ದುತುರ್ತುಕ್ರಮಕ್ಕೆಮುಂದಾಗಬೇಕು. ಕಂದಾಯ ಇಲಾಖೆ ನೀಡಿದ ಹಕ್ಕುಪತ್ರದ ಆಧಾರದ ಮೇಲೆ ಪುರಸಭೆ ಫಾರ್ಂ 3 ನೀಡಬೇಕು. ತುಂಗಭದ್ರಾ ಜಲಾಶಯದ ಹೂಳು ತಗೆಯುವ ಜೊತೆಗೆ ನೂತನ ಗೇಟ್ ಅಳವಡಿಸಬೇಕು. ನವಲಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆಮುಂದಾಗಬೇಕು. ಅಧಿಕಾರಿಗಳು ತಕ್ಷಣವೇ ರೈತರ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಬೇಕು' ಎಂದರು.

ಉಪ ತಹಶೀಲ್ದಾರ್ ಜಗದೀಶಕುಮಾರ, ಪುರಸಭೆ ವ್ಯವಸ್ಥಾಪಕ ಪರಮೇಶ್ವರಪ್ಪ, ನೀರಾವರಿ ಇಲಾಖೆಯ ಎಂಜಿನೀಯರ್ ವೆಂಕಟೇಶ್ವರ, ಜೆಸ್ಕಾಂ ಇಲಾಖೆಯ ಪ್ರತಿನಿಧಿಗೆ ವಿವಿಧ ಬೇಡಿಕೆಗಳ ಮನವಿಯನ್ನು

ಸಂಘದ ಪದಾಧಿಕಾರಿಗಳು ಸಲ್ಲಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹನುಮಂತಪ್ಪ ನಾಯಕ, ಪದಾಧಿಕಾರಿಗಳಾದ ರಮೇಶ ಭಂಗಿ, ನಾಗಭೂಷಣ, ಭಾಷಾಸಾಬ, ಸುರೇಶ ಮೇಟಿ, ಅಯ್ಯಪ್ಪ ಸುದ್ದಿ, ಭೀಮಣ್ಣ ಪನ್ನಾಪೂರ, ಸಣ್ಣ ರಾಮಣ್ಣ, ಶರಣಪ್ಪ ಕುರಿ, ಪರಶುರಾಮ್ ದಾರಿಮನಿ, ಪರಶುರಾಂ ಮಡಿವಾಳರ್ ಸೇರಿ ನೂರಾರು ರೈತರು ಉಪಸ್ಥಿತರಿದ್ದರು.

# ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತರಗತಿ ಕೊಠಡಿಗಳು ಹಾಗೂ ಗ್ರಂಥಾಲಯ ಕಟ್ಟಡಕ್ಕೆ ಶಂಕು ಸ್ಥಾಪನೆ

## ಸಮಾಜದ ಸುಧಾರಣೆಗೆ ಗುಣಮಟ್ಟದ ಶಿಕ್ಷಣ ಅಗತ್ಯವಿದೆ: ಶಾಸಕ ಹೆಚ್.ವೈ.ಮೇಟಿ



**ಬಾಗಲಕೋಟೆ:** ಇಂದಿನ ಪದವಿ ಕಲಿಯುವ ವಿದ್ಯಾರ್ಥಿಗಳು ಸಾಮಾಜಿಕ ಪರಿಸರದ ಜ್ಞಾನವನ್ನು ಅರಿತುಕೊಳ್ಳಬೇಕಾಗಿದೆ. ಸಮಾಜದ ಸುಧಾರಣೆಗೆ ಗುಣಮಟ್ಟದ ಶಿಕ್ಷಣ ಅಗತ್ಯವಿದೆ ಎಂದು ಶಾಸಕರಾದ ಹೆಚ್.ವೈ.ಮೇಟಿ ಅವರು ಹೇಳಿದರು.

ಅವರು ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ನಡೆದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಬಾಗಲಕೋಟೆ, ಕಾಲೇಜು ಮತ್ತು ತಾಂತ್ರಿಕಶಿಕ್ಷಣಇಲಾಖೆಯಅಡಿಯಲ್ಲಿಬಾಗಲಕೋಟೆ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತರಗತಿಗಳ ಕೊಠಡಿಗಳ ಹಾಗೂ ಗ್ರಂಥಾಲಯ ಕಟ್ಟಡ ನಿರ್ಮಾಣದ ಶಂಕುಸ್ಥಾಪನೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಂದುವರಿದು ಮಾತನಾಡಿ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಲ್ಲಿ ಓದುವ ಎಲ್ಲಾ ಮಕ್ಕಳಿಗೆ ಉತ್ತಮ ಸಂಸ್ಕೃತಿ, ಸಂಸ್ಕಾರ ಮತ್ತು ಮಾನವೀಯ ಸಂಬಂಧಗಳ ಮೌಲ್ಯವನ್ನು ತಿಳಿಸುವ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ಈ ಕಾಲೇಜು ರಾಜ್ಯದಲ್ಲಿಯೇ ನೋಡಲ್ ಮತ್ತು ಮಾಡಲ್ ಕಾಲೇಜಾಗಿ ಹೊರಹೊಮ್ಮಿದ್ದು ಇಡಿ ಜಿಲ್ಲೆಯ ಹೆಮ್ಮೆಯ ಸಂಗತಿಯಾಗಿದೆ. ಬರುವ ದಿನಗಳಲ್ಲಿ ಈ ಕಾಲೇಜು ಮತ್ತಷ್ಟು ಉನ್ನತ ಮಟ್ಟದಲ್ಲಿ ಬೆಳೆಯಲಿ ಅದಕ್ಕಾಗಿ ತರಗತಿಗಳ ಅನುಕೂಲಕ್ಕಾಗಿ ಕೊಠಡಿಗಳನ್ನು ಹಾಗೂ ಗ್ರಂಥಾಲಯದ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಲಾಗಿದ್ದು, ಇದರ ಉಪಯೋಗವನ್ನು ಎಲ್ಲಾ ವಿದ್ಯಾರ್ಥಿಗಳು ಪಡೆಯಬೇಕು ಎಂದು ಹೇಳಿದರು.

ಪ್ರಾಂಶುಪಾಲರಾದ ಡಾ.ಅರುಣಕುಮಾರ ಗಾಳಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ನಮ್ಮ ನವನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇಂದು ರಾಜ್ಯಮಟ್ಟದಲ್ಲಿ ಉತ್ತಮ ಬೆಳವಣಿಯಲ್ಲಿದ್ದು, ಸುಮಾರು ಮೂರು ಸಾವಿರದಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಕಾಲೇಜು ಅಭಿವೃದ್ಧಿಯಲ್ಲಿ ಶಾಸಕರ ಸಹಕಾರ ಮತ್ತು ಕೊಡುಗೆ ಅಪಾರವಿದೆ ಎಂದರು.

ಕಾರ್ಯಕ್ರಮದಲ್ಲಿ ನಗರಸಭೆಯ ಅಧ್ಯಕ್ಷರಾದ ಶ್ರೀಮತಿ ಸವಿತಾ ಲೆಂಕೆಣ್ಣವರ, ಜಿ.ಪಂ ಮಾಜಿ ಅಧ್ಯಕ್ಷರಾದ ಬಾಯಕ್ಕ ಮೇಟಿ, ಮುಖಂಡರಾದ ಮಾರೇಶ ಯಮನಾಳ, ದಂಡಿನ, ನಂದಿಕೋಲಮಠ, ಧರ್ಮಣ್ಣ, ಬೂಡಾ ಸದಸ್ಯರಾದ ಮಜ್ಜಿಗಿ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಶಾಸಕರಾದ ಹೆಚ್.ವೈ.ಮೇಟಿ ಅವರ 80 ನೇ ಹುಟ್ಟು ಹಬ್ಬದ ಅಂಗವಾಗಿ ಕಾಲೇಜಿನ ಪರವಾಗಿ ಸನ್ಮಾನಿಸಿ ಗೌರವಿಸಲಾಯಿತು. ಡಾ.ಚಂದ್ರಶೇಖರ ಕಾಳನ್ನವರ ನಿರೂಪಿಸಿದರು, ಪ್ರೊ.ಸಂಪತ್ ಲಮಾಣಿ ವಂದಿಸಿದರು. ಕಾರ್ಯಕ್ರಮದಲ್ಲಿಕಾಲೇಜಿನಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ನೌಕರಿ ಕೊಡಿ; ಉದ್ಯೋಗಕಾಂಕ್ಷಿಗಳ ಒತ್ತಾಯ

**ಕೊಪ್ಪಳ:** ರಾಜ್ಯ ಮತ್ತು ಕೇಂದ್ರ ಸರ್ಕಾರಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿ ನೌಕರಿಗಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿರುವ ಉದ್ಯೋಗದ ಆಕಾಂಕ್ಷಿಗಳಿಗೆ ನೆರವಾಗಬೇಕು ಎಂದು ಆಗ್ರಹಿಸಿ ಯುವಜನತೆ ನಗರದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಎಐಡಿಎಸ್‌ಒ ಸಮಿತಿಯ ಮುಖಂಡ ಸುಭಾನ್ ನೀರಲಗಿ, ನಿರುದ್ಯೋಗಕ್ಕೆ ಜನಸಂಖ್ಯೆಯಾಗಲಿ, ಕೌಶಲದ ಕೊರತೆ–ಯಾಗಲಿ ಕಾರಣವಲ್ಲ. ಇದು ದೊಡ್ಡ ಸುಳ್ಳು. ಯುವಕರು ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿರುವುದಕ್ಕೆ ಮುಖ್ಯಕಾರಣ ನಿರುದ್ಯೋಗವಾಗಿದೆ' ಎಂದು ಆರೋಪಿಸಿದರು.

ಉದ್ಯೋಗಾಕಾಂಕ್ಷಿ ಶರಣು ಲಿಂಗದಹಳ್ಳಿ ಮಾತನಾಡಿ,'ನಾವೆಲ್ಲರೂ ಒಗ್ಗಟ್ಟಾಗಬೇಕು,




ನಮ್ಮ ಹಕ್ಕುಗಳನ್ನು ಕೇಳದಿದ್ದರೆ ನಮ್ಮ ಧ್ವನಿ ಸರ್ಕಾರಕ್ಕೆ ತಲುಪುವುದಾದರೂ ಹೇಗೆ? ಹಾಗಾಗಿ ನಮ್ಮ ಒಗ್ಗಟ್ಟು, ನಮ್ಮ ಶಕ್ತಿ ಮುಂದಿನ ದಿನಗಳಲ್ಲಿ ದೊಡ್ಡ ಹೋರಾಟಕ್ಕೆ ಮುಂದಾಗಬೇಕು' ಎಂದು ಕರೆ ನೀಡಿದರು.

ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತುದಾರ ಸೈಯದ್‌ತೌಫಿಕ್‌ಮಾತನಾಡಿ 'ಚುನಾವಣಾ ಸಂದರ್ಭದಲ್ಲಿ ಮತ ಕೇಳುವಾಗ ಇರುವ ಕಾಳಜಿ, ಸಮಸ್ಯೆಗಳನ್ನು ಬಗೆಹರಿಸುವಾಗ ಇರುವುದಿಲ್ಲ.

ಯುವಕರನ್ನು ಬೀದಿಗಿಳಿಸಿದ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಬಿಸಿಮುಟ್ಟಿಸುವ ಕೆಲಸವನ್ನು ಮುಂದಿನ ದಿನಗಳಲ್ಲಿ ಯುವಕರು ಮಾಡಬೇಕು' ಎಂದು

> ನರೇಂದ್ರ ಮೋದಿ ನೇತೃತ್ವದ ಸರ್ಕಾರ ಆಡಳಿತಕ್ಕೆ ಬಂದಾಗಿನಿಂದ ಕೇವಲ ಸುಳ್ಳು ಭರವಸೆಗಳನ್ನು ನೀಡಿದೆ. ವರ್ಷಕ್ಕೆ ಎರಡು ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆಯನ್ನು ನೀಡಿದ್ದು ಸುಳ್ಳಾಗಿದೆ.
>
> **ಶರಣು ಗಡ್ಡಿ** ಎಐಡಿವೈಒ ಸಂಘಟನೆ ಮುಖಂಡ

ಹೇಳಿದರು.

ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ಸದಸ್ಯ ಕಾಸೀಂ ಕೆ.ಎನ್. ನಾಗೇಶನಹಳ್ಳಿ, ನಿಂಗುಬೆಣಕಲ್, ಶಶಿಕಲಾಹಿರೇಸಿಂದೋಗಿ, ಶರಣುಪಾಟೀಲ, ಬಸವರಾಜತಾವರಗೇರಾ, ಶರಣು ಆಗೋಲಿ, ಶಿವಕುಮಾರ್ ಕಂಚಿ, ನಾಗರಾಜ ವಿಠಲಾಪುರ, ಹೊನ್ನೂರ ಬೋಚನಹಳ್ಳಿ, ಪ್ರದೀಪ್ ಮಾದಿನೂರು, ಮಾರುತಿ ನಾಗೇಶನ ಹಳ್ಳಿ, ಮೌನೇಶ್ ಮಂಗಳೂರು, ಯಮನೂರ ಚಳ್ಳಾರಿ ಪಾಲ್ಗೊಂಡಿದ್ದರು.

# 'ವಾಲ್ಮೀಕಿ ವ್ಯಕ್ತಿತ್ವ ಎಲ್ಲರಿಗೂ ಮಾದರಿ'

**ಯಲಬುರ್ಗಾ :** ತಾಲ್ಲೂಕಿನ ಗುತ್ತೂರು ಗ್ರಾಮದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಪ್ರಯುಕ್ತ ಉಪನ್ಯಾಸ ಹಾಗೂ ಭಾವಚಿತ್ರದ ಮೆರವಣಿಗೆ ನಡೆಯಿತು.

ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ)ಯ ವಿಭಾಗೀಯ ಸಂಘಟನಾ ಸಂಚಾಲಕ ಪುಟ್ಟರಾಜ ಪೂಜಾರ ಮಾತನಾಡಿ,'ರಾಮಾಯಣ ಎಂಬ ಮಹಾಕಾವ್ಯ ರಚಿಸಿದ ವಾಲ್ಮೀಕಿಯವರ ವ್ಯಕ್ತಿತ್ವ ಪ್ರತಿಯೊಬ್ಬರಿಗೂ ಮಾದರಿಯಾಗಿದೆ. ಬದುಕಿನಲ್ಲಿ ಬದಲಾವಣೆ ಕಂಡುಕೊಂಡಿ–ದ್ದು, ಅವರು ಮೈಗೂಡಿಸಿಕೊಂಡಿದ್ದ ಮೌಲ್ಯಗಳು ನಮ್ಮೆಲ್ಲರಿಗೂ ಬದುಕು ಕಟ್ಟಿಕೊಳ್ಳಲು ಮಾರ್ಗಸೂಚಿಯಾಗಬೇಕಾಗಿದೆ' ಎಂ ದರು.

ವಾಲ್ಮೀಕಿ ಸಮಾಜದ ಮುಖಂಡ ಶಿವಪ್ಪ ದ್ಯಾಂಪೂರ ಮಾತನಾಡಿ,'ಮಹನಿಯರ ಸಂದೇ ಶಗಳು ಸನ್ಮಾರ್ಗ ತೋರಿಸುತ್ತವೆ. ಅಂಥ ಮಾರ್ಗದತ್ತ ನಡೆಯಬೇಕಾಗಿದೆ' ಎಂದರು.

ಇದಕ್ಕೂ ಮುನ್ನ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ಜರುಗಿತು. ಮಹಿಳೆಯರು ಕುಂಭಗಳೊಂದಿಗೆ ಭಾಗವಹಿಸಿದ್ದರು. ಮುಖಂಡರಾದ ಶ್ರೀಕಾಂತಗೌಡ ಮಾಲಿಪಾಟೀಲ, ಶಶಿಧರ ನಾಯಕ, ಹಿರಿಯರಾದ ನೂರಂದಪ್ಪ ದಾಸಪ್ಪನವರ, ಹನುಮಂತಪ್ಪ ಚಾಪಿ, ಮೂರ್ತಿಪ್ಪ ಮೂಲಿಮನಿ, ಗ್ರಾ.ಪಂ ಸದಸ್ಯೆ ದುರ್ಗಮ್ಮ ಗಟ್ಟೆಪ್ಪನವರ, ಚೆನ್ನಮ್ಮ, ಗ್ರಾ.ಪಂ ಅಧ್ಯಕ್ಷ ಶರಣಪ್ಪ ಇದ್ದರು.

# ವಾಲ್ಮೀಕಿ ಜಯಂತಿ: ಜನಮನ ಸರೆಗೊಂಡ ಮೆರವಣಿಗೆ

**ಕನಕಗಿರಿ :** ಪಟ್ಟಣದಲ್ಲಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾದ ತಾಲ್ಲೂಕು ಘಟಕದಿಂದ ಮಹರ್ಷಿ ವಾಲ್ಮೀಕಿ ಜಯಂತ್ಯುತ್ಸವ ಹಾಗೂ ವಾಲ್ಮೀಕಿ ಭಾವಚಿತ್ರದ ಮೆರವಣಿಗೆ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ಸುವರ್ಣಗಿರಿ ಸಂಸ್ಥಾನ ವಿರಕ್ತ ಮಠದ ಮುಂದೆ ನಡೆದ ಮೆರವಣಿಗೆಗೆ ಗಣ್ಯರು ಚಾಲನೆ ನೀಡಿದರು.

ಬಳಿಕ ರಾಜಬೀದಿ, ಕನಕಾಚಲಪತಿ ದೇಗುಲದ ರಸ್ತೆ, ಎಪಿಎಂಸಿ ಮಳಿಗೆ, ವಾಲ್ಮೀಕಿ ವೃತ್ತದಿಂದ ವಾಲ್ಮೀಕಿ ಹುತ್ತಿನವರೆಗೆ ಮೆರವಣಿಗೆ ಅದ್ದೂರಿಯಾಗಿ ನಡೆಯಿತು. ವಾಲ್ಮೀಕಿ ಹುತ್ತಿನ ಹತ್ತಿರ ಪೂಜೆ ನಡೆಯಿತು. ಮಹಿಳೆಯರ ಕುಂಭ, ಕಳಸ, ಕಂಪ್ಲಿಯ ರಾಮಸಾಗರದ ಕಹಳೆ ವಾದನ, ಅಬ್ಬಿಗೇರಿಯ ಮೋಜಿನಗೊಂಬೆ, ಸಿದ್ದಾಪುರದ ಹಗಲುವೇಷ, ಕೊನ್ನಾಪುರದ ಡೊಳ್ಳುಕುಣಿತ ಹಾಗೂ ಕುಕನೂರಿನ ಕರಡಿ ಮಜಲು ಕಲಾ ತಂಡಗಳು ಗಮನ ಸೆಳೆದವು. ನಾಯಕಮನೆತನದದೊರೆಗಳು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ವಾಲ್ಮೀಕಿ



ನಾಯಕ ಸಮಾಜದ ಗುರುಗಳು ಮತ್ತು ಸಾಧನೆ ತೋರಿದ ರಾಜರ ಭಾವಚಿತ್ರಗಳು ಆಕರ್ಷಿಸಿದವು. ಹುಲಿಹೈದರ ಸಂಸ್ಥಾನದ ರಾಜಾ ನವೀನ ಚಂದ್ರ ನಾಯಕ ಅವರನ್ನು ಸಾರೋಟದಲ್ಲಿ ಕೂಡಿಸಿ ಗೌರವಿಸಿದರು.

ಬಳಿಕ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಪ್ರಮುಖರಾದ ಬಿಲ್ಗಾರ ನಾಗರಾಜ, ಸಿದ್ದಪ್ಪ ನೀರ್ಲೂಟಿ ಮಾತನಾಡಿದರು. ರಾಜಾನವೀನಚಂದ್ರ ನಾಯಕ ಸಾನ್ನಿಧ್ಯವಹಿಸಿದ್ದರು. ಸಮಾಜದ ಅಧ್ಯಕ್ಷ ನಾಗರಾಜ ಇದ್ಲಾಪುರ ಅಧ್ಯಕ್ಷತೆವಹಿಸಿದ್ದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ, ಮಾಜಿ ಶಾಸಕ ಬಸವರಾಜ ದಢೇಸೂಗೂರು, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಹುಸೇನಬೀ ಚಳ್ಳಮರದ, ತಹಶೀಲ್ದಾರ್ ವಿಶ್ವನಾಥ ಮುರುಡಿ, ತಾಲ್ಲೂಕು ಪಂಚಾಯಿತಿ ಪ್ರಭಾರ ಇಒ ರಾಜಶೇಖರ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ವಿರೂಪಾಕ್ಷಿ, ಪಿಐ ಎಂ.ಡಿ. ಫೈಜುಲ್ಲಾ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಲಕ್ಷ್ಮಣ ಕಟ್ಟಿಮನಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ಹನುಮೇಶ ನಾಯಕ, ವೀರೇಶ ಸಮಗಂಡಿ, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗಂಗಾಧರಸ್ವಾಮಿ ಕಲ್ಲಬಾಗಿಲಮಠ, ವಕ್ತಾರ ಶರಣಬಸಪ್ಪ ಭತ್ತದ, ಬಿಜೆಪಿ ಮಂಡಲ ಅಧ್ಯಕ್ಷ ಸಣ್ಣ ಕನಕಪ್ಪ, ಮಾಜಿ ಅಧ್ಯಕ್ಷ ಮಹಾಂತೇಶ ಸಜ್ಜನ್, ಕೆಪಿಸಿಸಿ ಎಸ್ಟಿ ಘಟಕದ ಪ್ರಧಾನ ಕಾರ್ಯದರ್ಶಿ ರಾಮನಗೌಡ ಬುನ್ನಟ್ಟಿ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ವಾಗೀಶ ಹಿರೇಮಠ, ವಾಲ್ಮೀಕಿ ಮಹಾಸಭಾದ ತಾಲ್ಲೂಕು ಅಧ್ಯಕ್ಷ ನಾಗರಾಜ ಇದ್ಲಾಪುರ, ನಗರ ಘಟಕದ ಅಧ್ಯಕ್ಷ ನರಸಪ್ಪ ನಾಯಕ, ಪಟ್ಟಣ ಪಂಚಾಯಿತಿ ಉಪಾಧ್ಯಕ್ಷ ಕಂಠಿರಂಗ ನಾಯಕ, ಸದಸ್ಯ ಹನುಮಂತಪ್ಪ ಬಸರಿಗಿಡದ, ಪರಿಶಿಷ್ಟ ಪಂಗಡದ ಕಲ್ಯಾಣಾಧಿಕಾರಿ ಗ್ಯಾನನಗೌಡ, ಪ್ರಮುಖರಾದ ರಾಮನಗೌಡ ಬುನ್ನಟ್ಟಿ, ಶರಣಪ್ಪ ಕುರಿ, ನರಸಪ್ಪ, ಮುದಿಯಪ್ಪ ಖ್ಯಾಡೆದ, ಹುಲಿಗೆಮ್ಮ, ಶರತ್ ನಾಯಕ, ರಂಗಪ್ಪ ಕೊರಗಟಗಿ, ನರಸಪ್ಪ ನಾಯಕ, ಗ್ಯಾನಪ್ಪ ಗಾಣದಾಳ, ನಿಂಗಪ್ಪ ಪೂಜಾರ, ನಿಂಗಪ್ಪನಾಯಕ, ಗುರುಮೂರ್ತಿ, ವಕೀಲರ ಸಂಘದ ಅಧ್ಯಕ್ಷ ಶರಣಪ್ಪ, ಇತರರು ಇದ್ದರು. ಶಂಕರ ಬಿನ್ನಾಳ ಹಾಗೂ ಗೀತಾ ಹಂಚಾಟೆ ಅವರಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

# ಅಮಲು ಸಿರಪ್ ಮಾರಾಟ: ಬಂಧನ

**ದಾವಣಗೆರೆ :** ಅಮಲು ಬರುವ ಸಿರಪ್ ಬಾಟಲಿಗಳನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದು, ದ್ವಿಚಕ್ರ ವಾಹನ ಸೇರಿ ?1.25 ಲಕ್ಷ ಮೌಲ್ಯದ ವಿವಿಧ ಕಂಪನಿಗಳ ಸಿರಪ್ ಬಾಟಲಿ ಮತ್ತು ಮಾತ್ರೆಗಳನ್ನು ವಶಪಡಿಸಿಕೊಂಡಿದ್ದಾರೆ.

ಸ್ಥಳೀಯ ನಿವಾಸಿಗಳಾದ ಶಿವಕುಮಾರ, ಅಜಿಮುದ್ದೀನ್, ಮಹಮದ್ ಶಾರೀಕ್, ಚನ್ನಗಿರಿ ತಾಲ್ಲೂಕಿನ ಹೊನ್ನೇಬಾಗಿಬ ಸೈಯದ್ ಬಾಬು ಹಾಗೂ ಚನ್ನಗಿರಿ ಅಬ್ದುಲ್ ಗಫರ್ ಬಂಧಿತರು.

ಮಾದಕದ್ರವ್ಯನಿಗ್ರಹಪಡೆಯಸಿಬ್ಬಂದಿ ಗಸ್ತಿನಲ್ಲಿದ್ದಾಗ ಅಕ್ರಮವಾಗಿ ಅಮಲು ಬರುವ ಸಿರಪ್ ಬಾಟಲಿಗಳನ್ನು ಮಾರುತ್ತಿರುವುದು ಕಂಡುಬಂದಿತ್ತು. ಪ್ರಕರಣ ದಾಖಲಾಗಿದೆ.



# ಮೋದಿ ಅವರ 'ಹನುಮಾನ್' ಸಂದರ್ಭ ಅಡೆತಡೆಗಳ ಜಗತ್ತಿನಲ್ಲಿ ಭಾರತದ ಮಹಾ ಲಂಘನ

ಬೆಳಕಿನ ಹಬ್ಬದ ಅಂಗವಾಗಿ ಭಾರತದಾದ್ಯಂತ ದೀಪಗಳನ್ನುಬೆಳಗಿಸುತ್ತಿರುವಈಸಮಯದಲ್ಲಿ, ರಾಮಾಯಣದ ಕಾಲಾತೀತ ದೃಶ್ಯವು ನಮ್ಮ ವರ್ತಮಾನವನ್ನು ಹೋಲುವಂತಿದೆ. 'ಹನುಮಂತ'ನು, ತನ್ನ ಶಕ್ತಿಯ ಬಗ್ಗೆ ತನಗೇ ಅರಿವಿಲ್ಲದೆಸಮುದ್ರದಅಂಚಿನಲ್ಲಿನಿಂತಿರುತ್ತಾನೆ. 'ಜಾಂಬುವಂತ' ಹನುಮಂತನಿಗೆ ಅವನ ಶಕ್ತಿಯ ಬಗ್ಗೆ ನೆನಪಿಸುವವರೆಗೂ ತನ್ನ ಅಂತರ್ಗತ ಸಾಮರ್ಥ್ಯದ ಬಗ್ಗೆ ಅವನಿಗೆ ತಿಳಿಯುವುದೇ ಇಲ್ಲ. ಆ ನಂತರ ನಡೆದದ್ದೇ ಸಾಗರ ಲಂಘನ. ಅದು ಪವಾಡವಲ್ಲ; ಅದು ಚಲನೆಯಲ್ಲಿನ ಆತ್ಮವಿಶ್ವಾಸ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಭಾರತೀಯ ಆರ್ಥಿಕತೆಯನ್ನು ಸಜ್ಜುಗೊಳಿಸುತ್ತಿರುವುದು ಇದಕ್ಕಾಗಿಯೇ: ಜಾಗತಿಕ ಪ್ರಕ್ಷುಬ್ಧತೆಯನ್ನು ಎದುರಿಸಿ ಹೊರಬರಲು ಭಾರತದ ಆರ್ಥಿಕತೆ-ಯ ಅಂತರ್ಗತ ಶಕ್ತಿಯನ್ನು ಹೊರತರುವ ಪ್ರಯತ್ನ. ಹೊಸ ವೀಸಾ ನಿರ್ಬಂಧಗಳು ಮತ್ತು ಪ್ರತಿಸುಂಕಗಳ ಮೂಲಕ ಜಗತ್ತಿನ ದೇಶಗಳು ತಮ್ಮ ಸುತ್ತಲೂ ತಡೆಗೋಡೆ ಕಟ್ಟಿಕೊಳ್ಳುತ್ತಿವೆ. ಇಂತಹ ಸನ್ನಿವೇಶದಲ್ಲಿ, ಮೋದಿ ಅವರ ನೇತೃತ್ವದಲ್ಲಿ ಭಾರತವು ತನ್ನ ಅಂತರ್ಗತ ವಿಶ್ವಾಸವನ್ನು ಅನಾವರಣಗೊಳಿಸುತ್ತಿದೆ, ಪ್ರತಿಕೂಲತೆಯನ್ನು ವೇಗವರ್ಧನೆಯಾಗಿ ಪರಿವರ್ತಿಸುತ್ತಿದೆ.

ಇತ್ತೀಚಿನ ತಿಂಗಳುಗಳಲ್ಲಿ, ಅಮೆರಿಕ ಸರ್ಕಾರ ಹೊಸ 'ಎಚ್-1ಬಿ' ವೀಸಾ ಅರ್ಜಿಗಳಿಗೆ 1,00,000 ಡಾಲರ್ ಶುಲ್ಕವನ್ನು ವಿಧಿಸಿದೆ ಜೊತೆಗೆ ಬ್ರ್ಯಾಂಡೆಡ್ ಮತ್ತು ಪೇಟೆಂಟ್ ಪಡೆದ ಔಷಧೀಯ ಆಮದುಗಳ ಮೇಲೆ 100% ಸುಂಕವನ್ನು ವಿಧಿಸಿದೆ. ಸ್ಥಳೀಯ ಉದ್ಯೋಗ ರಕ್ಷಣೆಯ ನೆಪದಲ್ಲಿ ಈ ಕ್ರಮಗಳನ್ನು ಕೈಗೊಳ್ಳಲಾಗಿದೆ. ಆದರೆ, ಈ ಕ್ರಮಗಳು ಆಳದಲ್ಲಿ ಅಡಗಿರುವ ಒಳಾರ್ಥವನ್ನು - ಅಭಿವೃದ್ಧಿ ಹೊಂದಿದ ಜಗತ್ತಿನಲ್ಲಿ ರಕ್ಷಣಾತ್ಮಕತೆ ಮತ್ತು ಜನಸಂಖ್ಯಾ ಆತಂಕದ ಮರಳುವಿಕೆಯನ್ನು ಪ್ರತಿಧ್ವನಿಸುತ್ತವೆ. ಯಾವುದೇ ಸುಂಕವು ಮುಟ್ಟಲಾಗದ ಮೂರು ಸ್ತಂಭಗಳನ್ನು - ಅಗಾಧತೆ, ಕೌಶಲ್ಯ ಮತ್ತು ಸ್ವಾವಲಂಬನೆಯನ್ನು ಬಲಪಡಿಸುವುದು ಪ್ರಧಾನಮಂತ್ರಿ ಮೋದಿ ಅವರ ನೇತೃತ್ವದಲ್ಲಿ ಭಾರತ ಇದಕ್ಕೆ ನೀಡಬಲ್ಲ ಉತ್ತರವಾಗಿದೆ.

ಭಾರತದೊಂದಿಗೆ ಹೋಲಿಸಿದರೆ ಜಗತ್ತಿನ ಪರಿಸ್ಥಿತಿ ವ್ಯತಿರಿಕ್ತವಾಗಿರುದನ್ನು ಢಾಳವಾಗಿ ಗಮನಿಸಬಹುದು. ಚೀನಾದ ಜನಸಂಖ್ಯೆಗೆ ವೇಗವಾಗಿ ಮುಪ್ಪಡರುತ್ತಿದೆ, ಅದರ ಸರಾಸರಿ ವಯಸ್ಸು ಈಗ ನಲವತ್ತು ದಾಟಿದೆ, ಆದರೆ ಭಾರತದ ಜನಸಂಖ್ಯೆಯ ಸರಾಸರಿ ವಯಸ್ಸು ಇಪ್ಪತ್ತೊಂಬತ್ತು ವರ್ಷಕ್ಕಿಂತ ಕಡಿಮೆ ಇದೆ. ನಮ್ಮ ಜನರಲ್ಲಿ ಮೂರನೇ ಎರಡರಷ್ಟು ಜನರು ಮೂವತ್ತೈದಕ್ಕಿಂತ ಕಡಿಮೆ ವಯಸ್ಸಿನವರು. ಕೌಶಲ್ಯ, ಶಿಕ್ಷಣ ಮತ್ತು ಉದ್ಯಮಶೀಲತೆಯ ಮೂಲಕ ಬಳಸಿಕೊಳ್ಳಲಾದ ಯುವ ಶಕ್ತಿಯು ಭಾರತವನ್ನುವಿಶ್ವಆರ್ಥಿಕತೆಯಬೆಳವಣಿಗೆಯ ಎಂಜಿನ್ ಆಗಿ ಮಾಡಬಲ್ಲದು. ಕಳೆದ ವರ್ಷ ಜಾಗತಿಕ ಬೆಳವಣಿಗೆಯಲ್ಲಿ ಭಾರತದ ಕೊಡುಗೆ ಶೇಕಡಾ ಹದಿನಾರಕ್ಕಿಂತ ಹೆಚ್ಚು ಎಂದು ಜಾಗತಿಕ ಸಂಸ್ಥೆಗಳು ವರದಿ ಮಾಡಿದಾಗ ಅದು ಬರೀ ಘೋಷಣೆಯಾಗಿರಲಿಲ್ಲ, ಅದು ಪ್ರಧಾನಮಂತ್ರಿ ಅವರ ನಾಯಕತ್ವದಲ್ಲಿ ಒಂದು ದಶಕದ ಸುಧಾರಣೆ, ಹೂಡಿಕೆ ಮತ್ತು ಮೂಲಸೌಕರ್ಯದ ಫಲ.

ಇತ್ತೀಚಿನ ದತ್ತಾಂಶವು ಈ ವೇಗವನ್ನು ಒತ್ತಿಹೇಳುತ್ತದೆ. ಸದೃಢವಾದ ದೇಶೀಯ ಬೇಡಿಕೆ, ಸ್ಥಿರ ಹೂಡಿಕೆಯ ಹರಿವು ಮತ್ತು ಸಮೃದ್ಧ ಮುಂಗಾರು ಮುನ್ನೋಟವನ್ನು ಉಲ್ಲೇಖಿಸಿ ರಿಸರ್ವ್ ಬ್ಯಾಂಕ್ 2026ರ ಹಣಕಾಸು ವರ್ಷದಲ್ಲಿ ಭಾರತದ ಜಿ.ಡಿ.ಪಿ ಮುನ್ಸೂಚನೆಯನ್ನುಶೇಕಡಾ6.8ಕ್ಕೆಪರಿಷ್ಕರಿಸಿದೆ. ಸೆಪ್ಟೆಂಬರ್ನಲ್ಲಿ ಜಿ.ಎಸ್.ಟಿ ಸಂಗ್ರಹವು 1.89 ಲಕ್ಷ ಕೋಟಿ ರೂ.ಗಳನ್ನು ದಾಟಿದೆ, ಇದು ಸತತ ಒಂಬತ್ತನೇ ತಿಂಗಳು 1.8 ಲಕ್ಷ ಕೋಟಿ ರೂ.ಗಿಂತ ಅಧಿಕ ಮಟ್ಟದಲ್ಲಿ ಮುಂದುವರಿದಿದೆ. ಇದು ಗ್ರಾಹಕರ ಅನುಭೋಗದಲ್ಲಿ ಭರ್ಜರಿ ಏರಿಕೆ ಮತ್ತು ವಿಸ್ತರಿಸುತ್ತಿರುವ ತೆರಿಗೆ ವ್ಯಾಪ್ತಿಯನ್ನು ತೋರಿಸುತ್ತದೆ. ವಿದೇಶಿ ವಿನಿಮಯ ಮೀಸಲು 700 ದಶಲಕ್ಷ ಡಾಲರ್ಗಳನ್ನು ದಾಟಿದೆ. ಇದು ಸುಮಾರುಹನ್ನೊಂದುತಿಂಗಳಆಮದುಗಳನ್ನು ಸರಿದೂಗಿಸಲು ಸಾಕಾಗುತ್ತದೆ. ಈ ಮಧ್ಯೆ, ಜೂನ್ ತ್ರೈಮಾಸಿಕದಲ್ಲಿ ಹಣ ರವಾನೆಯು 33.2ಬಿಲಿಯನ್ಡಾಲರ್ಗಳಷ್ಟಿದ್ದು,ಇದುಕಳೆದ ವರ್ಷದ ಮಟ್ಟಕ್ಕಿಂತ ಹೆಚ್ಚಾಗಿದೆ. ಉತ್ಪಾದನಾ ಖರೀದಿ ಸೂಚ್ಯಂಕ (ಪಿ.ಎಂ.ಐ) 57.7 ಮತ್ತು ಸೇವೆಗಳ ಖರೀದಿ ಸೂಚ್ಯಂಕ (ಪಿ.ಎಂ.ಐ) 60.9 ರಲ್ಲಿ ಬಲವಾಗಿ ನೆಲೆಗೊಂಡಿದ್ದವು, ಇದು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ದೊಡ್ಡ ಆರ್ಥಿಕತೆಯಾಗಿ ಭಾರತದ ಸ್ಥಾನಮಾನವನ್ನು ಮನರುಚ್ಚರಿಸಿತು.

ಈ ಮುನ್ನಡೆಯು ಮಾರುಕಟ್ಟೆಗಳು ಮತ್ತು ಷೇರುಪೇಟೆಯಲ್ಲಿಯೂ ಪ್ರತಿಫಲಿಸಿತು. ಈ ದಸರಾದಲ್ಲಿ ಚಿಲ್ಲರೆ ಮತ್ತು ಇ-ಕಾಮರ್ಸ್ ಮಾರಾಟವು ಇದುವರೆಗಿನ ಗರಿಷ್ಠ ಮಟ್ಟವನ್ನು ಮುಟ್ಟಿದೆ, 'ಸಿ.ಎ.ಐ.ಟಿ' ಮತ್ತು 'ರೀಟೇಲರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ'ದಂತಹ ಉದ್ಯಮ ಸಂಸ್ಥೆಗಳ ಪ್ರಕಾರ 3.7 ಲಕ್ಷ ಕೋಟಿ ರೂ.ಗಳನ್ನು ದಾಟಿದೆ - ಇದು ಕಳೆದ ವರ್ಷಕ್ಕಿಂತ ಸುಮಾರು 15 ಪ್ರತಿಶತದಷ್ಟು ಹೆಚ್ಚಾಗಿದೆ. ಆಟೋಮೊಬೈಲ್, ಎಲೆಕ್ಟ್ರಾನಿಕ್ಸ್, ಚಿನ್ನ ಮತ್ತು ಉಡುಪುಗಳ ಬೇಡಿಕೆಯಿಂದ ಪ್ರೇರಿತವಾದ ಹಬ್ಬದ ಋತುವಿನ ಮೊದಲ ಹದಿನೈದು ದಿನಗಳಲ್ಲಿ ಆನ್ಲೈನ್ ಮಾರಾಟ ವೇದಿಕೆಗಳೇ ಒಟ್ಟು ಸರಕು ಮೌಲ್ಯದಲ್ಲಿ 90,000 ಕೋಟಿ ರೂ.ಗಳನ್ನು ಗಳಿಸಿವೆ. ದೀಪಾವಳಿ ಈಗ ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿಯುವ ನಿರೀಕ್ಷೆಯಿದೆ, ಇದು ಗ್ರಾಹಕರ ವಿಶ್ವಾಸವನ್ನು ಮಾತ್ರವಲ್ಲದೆ ಔಪಚಾರಿಕ ಸಾಲ, ಡಿಜಿಟಲ್ ಪಾವತಿಗಳು ಮತ್ತು ಗ್ರಾಮೀಣ ಖರೀದಿ ಶಕ್ತಿಯನ್ನು ವಿಸ್ತರಿಸುವ ಸರ್ಕಾರದ ನಿರಂತರ ಪ್ರಯತ್ನದ ಯಶಸ್ಸನ್ನು ಸೂಚಿಸುತ್ತದೆ.

ಭಾರತದಆರ್ಥಿಕಅಡಿಪಾಯಗಳುದೃಢವಾಗಿವೆ. ಕಳೆದದಶಕದಲ್ಲಿ,ಭಾರತದ'ಜಿ.ಡಿ.ಪಿ'ಬಹುತೇಕ ದ್ವಿಗುಣಗೊಂಡು ವಿಶ್ವದ ನಾಲ್ಕನೇ ಅತಿದೊಡ್ಡ 'ಜಿ.ಡಿ.ಪಿ'ಯಾಗಿದೆ ಮತ್ತು ಜರ್ಮನಿಯನ್ನು ಹಿಂದಿಕ್ಕುವ ನಿರೀಕ್ಷೆಯಿದೆ. ವಿದೇಶಿ ವಿನಿಮಯ ಮೀಸಲು 600 ಶತಕೋಟಿ ಡಾಲರ್ ಮೀರಿದೆ. ಹಣದುಬ್ಬರವು ಮಧ್ಯಮವಾಗಿದೆ, ಮತ್ತು ಹಣಕಾಸಿನ ವಿವೇಚನೆಯು ದಾಖಲೆಯ ಸಾರ್ವಜನಿಕ ಬಂಡವಾಳ ವೆಚ್ಚದೊಂದಿಗೆ ಹೊಂದಿಕೆಯಾಗುತ್ತದೆ. 2024-25ರಲ್ಲಿ, ಭಾರತದ ಸರಕು ಮತ್ತು ಸೇವೆಗಳ ಒಟ್ಟಾ-ರೆ ರಫ್ತು ಸುಮಾರು 825 ಶತಕೋಟಿ ಡಾಲರ್ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ. ಇದೇ ವೇಳೆ, ಕೇವಲ ಸರಕು ರಫ್ತು ಮೊತ್ತವೇ ಸುಮಾರು 437 ಶತಕೋಟಿ ಡಾಲರ್ ಆಗಿತ್ತು. ನವೀಕರಿಸಬಹುದಾದ ಇಂಧನ ಸಾಮರ್ಥ್ಯವು 220 ಗಿಗಾವ್ಯಾಟ್ ಮೀರಿದೆ. ಈ ಸಂಖ್ಯೆಗಳು ದೂರದೃಷ್ಟಿಯನ್ನು ಅನುಷ್ಠಾನದೊಂದಿಗೆ ಹೊಂದಿಸುವ ಪ್ರಬಲ ನಾಯಕರೊಬ್ಬರ ನೇತೃತ್ವದಲ್ಲಿ ದುರ್ಬಲದಿಂದ ಅಸಾಧಾರಣ ಮಟ್ಟಕ್ಕೆ ಬೆಳೆದ ದೇಶವೊಂದರ ಯಶೋಗಾಥೆಯನ್ನು ಹೇಳುತ್ತವೆ.

'ಆತ್ಮನಿರ್ಭರ ಭಾರತ'ದ ಬಗ್ಗೆ ಪ್ರಧಾನಮಂತ್ರಿ ಮೋದಿ ಅವರ ಕಾರ್ಯವಿಧಾನವನ್ನು ರಾಜಕೀಯ ಲಾಭಕ್ಕಾಗಿ ಕೆಲವು ವಿರೋಧಿಗಳು ತಪ್ಪಾಗಿ ಅರ್ಥೈಸುತ್ತಿದ್ದಾರೆ ಎಂಬುದು ಅತ್ಯಂತ ದುಃಖದ ವಾಸ್ತವವಾಗಿದೆ, ಇಂಥವರು ಇನ್ನೂ ಇಪ್ಪತ್ತನೇ ಶತಮಾನದ ಮಸೂರಗಳಿಂದಲೇ ಜಗತ್ತನ್ನು ನೋಡುತ್ತಿದ್ದಾರೆ. ಸ್ವಾವಲಂಬನೆ ಎಂದರೆ ಪ್ರತ್ಯೇಕತೆಯಲ್ಲ. 'ಆತ್ಮನಿರ್ಭರ ಭಾರತ'ವನ್ನು ಬಾಹ್ಯಮುಖವಾಗಿ ಹೊರಹೊಮ್ಮಿದ ಶಕ್ತಿ ಎಂದು ಅತ್ಯುತ್ತಮವಾಗಿ ಅರ್ಥೈಸಿಕೊಳ್ಳಲಾಗುತ್ತದೆ. ಇದು ಸಮಾನ ನಿಯಮಗಳ ಮೇಲೆ ತೊಡಗಿಸಿಕೊಳ್ಳಲು ಅನುವು ಮಾಡಿಕೊಡುವ ಶಕ್ತಿಯಾಗಿದೆ. ಇದು 'ಜಗತ್ತಿಗಾಗಿ ಮೇಕ್ ಇನ್ ಇಂಡಿ-ಯಾ' ಸಾಮರ್ಥ್ಯವಾಗಿದೆ. ಮೌಲ್ಯವನ್ನು ಸೃಷ್ಟಿಸುವವರತ್ತಲೇ ಅದು ಹರಿಯುವಂತೆ ಮಾಡಬಲ್ಲ ಮತ್ತು ಜಾಗತಿಕ ಮಾರುಕಟ್ಟೆಗಳನ್ನು ಸಮಾನವಾಗಿ ತೊಡಗಿಸಿಕೊಳ್ಳಬಲ್ಲ ನಿಟ್ಟಿನಲ್ಲಿ ಅವಕಾಶವನ್ನು ವಿಕೇಂದ್ರೀಕರಣಗೊಳಿಸುವ ಶಕ್ತಿ ಇದಾಗಿದೆ. ಮೊಬೈಲ್ ಫೋನ್ಗಳು ಮತ್ತು ರಕ್ಷಣಾಉಪಕರಣಗಳಿಂದಹಿಡಿದುವೈದ್ಯಕೀಯ ಸಾಧನಗಳು ಮತ್ತು ಸೌರ ಮಾಡ್ಯೂಲ್ಗವರೆಗೆ, ಉತ್ಪಾದನೆ-ಆಧಾರಿತ ಪ್ರೋತ್ಸಾಹಧನ ಯೋಜನೆಗಳು ಹೂಡಿಕೆ, ಉದ್ಯೋಗಗಳು ಮತ್ತು ರಫ್ತುಗಳನ್ನು ವೇಗಗೊಳಿಸಿವೆ.

'ಅನುಸಂಧಾನ್ ನ್ಯಾಷನಲ್ ರಿಸರ್ಚ್ ಫೌಂಡೇಶನ್', 50,000 ಕೋಟಿ ರೂ.ಗಳ ಯೋಜಿತ ವೆಚ್ಚದೊಂದಿಗೆ, ನಮ್ಮ ಸಂಶೋಧನೆ ಮತ್ತು ಅಭಿವೃದ್ಧಿ ಪರಿಸರ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುತ್ತದೆ. ನವೋದ್ಯಮಗಳಿಗಾಗಿ ಎರಡನೇ 'ನಿಧಿಗಳ ನಿಧಿ' ಸ್ಥಾಪನೆ ಮತ್ತು 'ಪಿ.ಎಲ್.ಐ' ಯೋಜನೆಗಳ ವಿಸ್ತರಣೆಯು ನಮ್ಮ ತಂತ್ರಜ್ಞಾನದ ನೆಲೆಯನ್ನು ಮತ್ತಷ್ಟು ಆಳಗೊಳಿಸುತ್ತದೆ. 'ಆತ್ಮನಿರ್ಭರ ಭಾರತ'ವು ಒಂದು ವ್ಯೂಹಾತ್ಮಕ ಸ್ವಾಯತ್ತತೆ-ಯಾಗಿದ್ದು, ಇದು ಸ್ವಯಂ-ವಿಶ್ವಾಸದ ತಳಹದಿಯ ಮೇಲೆ ನಿಂತಿದೆ, ನೀತಿಯ ಮೂಲಕ ಸಾಕಾರಗೊಂಡಿದೆ ಮತ್ತು ಜಾಗತಿಕ ಸಹಭಾಗಿತ್ವದಿಂದ ಶಕ್ತಿಪಡೆದಿದೆ.

ಮೋದಿಅವರಮಾರ್ಗದರ್ಶನದಲ್ಲಿ,ಭಾರತವು ವಿಶ್ವದ ಅತ್ಯಂತ ಸಮಗ್ರ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನುನಿರ್ಮಿಸಿದೆ.'ಏಕೀಕೃತ ಪಾವತಿ ಇಂಟರ್ಫೇಸ್'(ಯು.ಪಿ.ಐ) ಈಗ 'ವೀಸಾ' ಪಾವತಿ ವ್ಯವಸ್ಥೆಗಿಂತಲೂ ಹೆಚ್ಚಿನ ದೈನಂದಿನವಹಿವಾಟುಗಳನ್ನುನಿರ್ವಹಿಸುತ್ತದೆ, ಈ ಪ್ರಮಾಣವು ದಿನಕ್ಕೆ 650 ದಶಲಕ್ಷಕ್ಕೂ ಹೆಚ್ಚಾಗಿದೆ. 'ಆಧಾರ್', 'ಡಿಜಿಲಾಕರ್' ಮತ್ತು 'ಒ.ಎನ್.ಡಿ.ಸಿ' ಒಟ್ಟಾಗಿ ನಾಗರಿಕರು, ಸಣ್ಣ ಉದ್ಯಮಗಳು ಮತ್ತು ನವೋದ್ಯಮಿಗಳನ್ನು ಜನತೆಯೊಂದಿಗೆ ಸಂಪರ್ಕಿಸುವ ಪರಿಸರ ವ್ಯವಸ್ಥೆಯನ್ನು ರೂಪಿಸುತ್ತವೆ. ಸಿಂಗಾಪುರ, ಯು.ಎ.ಇ ಮತ್ತು ಇತರ ದೇಶಗಳೊಂದಿಗೆ 'ಯು.ಪಿ.ಐ' ಜಾಗತಿಕ ಪಾಲುದಾರಿಕೆಯು ಭಾರತೀಯ ಆವಿಷ್ಕಾರವು ಜಾಗತಿಕ ಮಾನದಂಡಗಳನ್ನು ನಿಗದಿಪಡಿಸಬಹುದು ಎಂದು ತೋರಿಸುತ್ತದೆ. ಇದು ಆಡಳಿತ, ಸಬಲೀಕರಣ ಮತ್ತು ರಫ್ತು ತಂತ್ರಜ್ಞಾನವಾಗಿ ಹೊರಹೊಮ್ಮಿದೆ.

ಜನರುಈಯಶೋಗಾಥೆಯಕೇಂದ್ರಬಿಂದುವಾಗಿ ಉಳಿದಿದ್ದಾರೆ. 32 ದಶಲಕ್ಷಕ್ಕೂ ಹೆಚ್ಚು ಪ್ರಬಲ ನಮ್ಮ ಅನಿವಾಸಿ ಭಾರತೀಯರು ವಿಶ್ವದ ಅತ್ಯಂತ ಯಶಸ್ವಿ ಮತ್ತು ಗೌರವಾನ್ವಿತರಾಗಿದ್ದಾರೆ. ಇಂದು 11 'ಫಾರ್ಚೂನ್ 500' ಕಂಪನಿಗಳನ್ನು ಭಾರತೀಯ ಮೂಲದ ಸಿ.ಇ.ಒಗಳು ಮುನ್ನಡೆಸುತ್ತಿದ್ದಾರೆ, ಈ ಕಂಪನಿಗಳು ಒಟ್ಟಾಗಿ ಆರು ಟ್ರಿಲಿಯನ್ ಡಾಲರ್ಗಿಂತ ಅಧಿಕ ಮಾರುಕಟ್ಟೆ ಬಂಡವಾಳೀಕರಣವನ್ನು ನಿಯಂತ್ರಿಸುತ್ತವೆ. ಅವರ ಪ್ರಯಾಣವು ನವ ಭಾರತದ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತವೆ: ನುರಿತ, ಆತ್ಮವಿಶ್ವಾಸ, ಪರಿಹಾರ ಆಧಾರಿತ. 2024ರಲ್ಲಿ 135 ಶತಕೋಟಿ ಡಾಲರ್ ಹಣ ರವಾನೆಯುಕೇವಲಸಂಪತ್ತಿನಒಳಹರಿವುಅಲ್ಲ; ಅದು ನಂಬಿಕೆಯ ದೃಢೀಕರಣ. ಪ್ರಧಾನಮಂತ್ರಿ ಮೋದಿ ಅವರು ಆಗಾಗ್ಗೆ ಹೇಳುವಂತೆ, ವಿದೇಶದಲ್ಲಿರುವ ಭಾರತೀಯರು ಕೇವಲ ವಲಸಿಗರಲ್ಲ, ಬದಲಿಗೆ ಭಾರತದ ಮೌಲ್ಯಗಳು ಮತ್ತು ಉದ್ಯಮದ ರಾಯಭಾರಿಗಳು.

ಪ್ರಧಾನಮಂತ್ರಿ ಅವರ ನಾಯಕತ್ವವು ಈ ಚದುರಿದ ಜಾಗತಿಕ ಶಕ್ತಿಗೆ ದೇಶೀಯ ಆಧಾರವನ್ನು ನೀಡಿದೆ. 'ಮೇಕ್ ಇನ್ ಇಂಡಿಯಾ', 'ಸ್ಟಾರ್ಟಪ್ ಇಂಡಿಯಾ' ಮತ್ತು 'ಸ್ಕಿಲ್ ಇಂಡಿಯಾ' ಸಮಾನಾಂತರ ಮಾರ್ಗಗಳಲ್ಲ, ಬದಲಿಗೆ - ಅವಕಾಶಗಳನ್ನು ಗುರುತಿಸುವುದು, ಉದ್ಯಮಶೀಲತೆಯನ್ನು ಸಕ್ರಿಯಗೊಳಿಸುವುದು, ಪ್ರತಿಭೆಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಸಂಪರ್ಕಿತ ಮೌಲ್ಯ ಸರಪಳಿಗಳು. ಮುಂದಿನ ಹಂತವು ಸಮಗ್ರ ಜಾಗತಿಕ ಕೌಶಲ್ಯ ಮಿಷನ್ ಆಗಿದ್ದು, ಅದು ಈ ಉಪಕ್ರಮಗಳನ್ನು ಒಂದೇ ಚೌಕಟ್ಟಿನಡಿಯಲ್ಲಿ ಒಂದುಗೂಡಿಸುತ್ತದೆ. ಅಂತರರಾಷ್ಟ್ರೀಯ ಪ್ರಮಾಣೀಕರಣಗಳು,ಕಾರ್ಮಿಕರಿಗೆನಿರ್ಗಮನ ಪೂರ್ವ ತರಬೇತಿ, ಭಾಷೆ ಮತ್ತು ಸಾಂಸ್ಕೃತಿಕ ದೃಷ್ಟಿಕೋನ ಹಾಗೂ ವರ್ಗಾವಣೆಸಾಧ್ಯವಿರುವ ಸಾಮಾಜಿಕ-ಭದ್ರತಾ ಒಪ್ಪಂದಗಳೊಂದಿಗೆ ಹೊಂದಿಕೆಯಾದ ಪ್ರಮಾಣೀಕೃತ ಪಠ್ಯಕ್ರಮವು ಭಾರತೀಯ ಕಾರ್ಮಿಕರನ್ನು ಖಂಡಗಳಾದ್ಯಂತ ಆದ್ಯತೆಯ ವೃತ್ತಿಪರರನ್ನಾಗಿ ಮಾಡುತ್ತದೆ. ಮೋದಿ ಅವರ ರಾಜತಾಂತ್ರಿಕತೆ-ಯ ಅಡಿಯಲ್ಲಿ ರೂಪುಗೊಂಡ ಅನೇಕ ಸರ್ಕಾರ-ಸರ್ಕಾರ(ಜಿ2ಜಿ) ಪಾಲುದಾರಿಕೆಗಳ ಮೂಲಕ ಈ ಕಾರ್ಯಸೂಚಿಯು ಈಗಾಗಲೇ ಚಾಲ್ತಿಯಲ್ಲಿದೆ.

ಆದ್ದರಿಂದ ಭಾರತದ ಇಂದಿನ ಪರಿಸ್ಥಿತಿಗೆ ಹನುಮಂತನ ಸಾಗರ ಲಂಘನದ ಸಾಂ-ಕೇತಿಕತೆಯು ಅತ್ಯಂತ ಸೂಕ್ತವಾಗಿ ಹೊಂದಿಕೆಯಾಗುತ್ತದೆ. ಇದು ಸಂರಕ್ಷಣಾತ್ಮಕ ಪ್ರತಿಕ್ರಿಯೆಯಲ್ಲ, ಬದಲಿಗೆ ಆತ್ಮಸಾಕ್ಷಾತ್ಕಾರದ ಮೂಲಕ ಪೂರೈಸಿದ ಕರ್ತವ್ಯ. ಭಾರತದ ಹಣೆಬರಹವು ದೇಶದ ಜನರ ಸಾಮರ್ಥ್ಯವನ್ನು ಜಾಗೃತಗೊಳಿಸುವುದರಲ್ಲಿದೆ ಎಂಬ ಅದೇ ನಂಬಿಕೆಯಲ್ಲಿ ಪ್ರಧಾನಮಂತ್ರಿ ಮೋದಿ ಅವರ ಆಡಳಿತತತ್ವವುಬೇರೂರಿದೆ.ಮೂಲಸೌಕರ್ಯ, ಡಿಜಿಟಲ್ ಪರಿವರ್ತನೆ, ಹಸಿರು ಇಂಧನ ಮತ್ತು ಜಾಗತಿಕ ಪಾಲುದಾರಿಕೆಗಳು ಆ ಜಾಗೃತಿಯ ಸಾಧನಗಳಾಗಿವೆ. ಇತರರು ಗೋಡೆಗಳನ್ನು ನಿರ್ಮಿಸಿದಾಗ, ಭಾರತವು ಸಾಮರ್ಥ್ಯವನ್ನು ನಿರ್ಮಿಸುತ್ತದೆ. ಇತರರು ವ್ಯಾಪಾರವನ್ನು ಸಂಕುಚಿತಗೊಳಿಸಿದಾಗ, ಭಾರತವು ಅವಕಾಶಗಳನ್ನು ವಿಸ್ತರಿಸುತ್ತದೆ. ಇತರರು ಭವಿಷ್ಯದ ಬಗ್ಗೆ ಭಯಪಟ್ಟಾಗ, ಭಾರತವು ಅದಕ್ಕೆ ಸಿದ್ಧವಾಗುತ್ತದೆ.

ಹನುಮಂತನ ಸಾಗರ ಲಂಘನವು ಅಂತರ್ಗತ ಸಾಮರ್ಥ್ಯದ ನೆನಪಿಸುವುಕೆಯನ್ನು ಸೂಚಿಸುತ್ತದೆ. ರಾಷ್ಟ್ರದ ವಿಚಾರದಲ್ಲೂ ಅಂತಹ ಅಂತರ್ಗತ ಸಾಮರ್ಥ್ಯವನ್ನು ನೆನಪಿಸಿ ಅನಾವರಣಗೊಳಿಸುವುದು ಪ್ರಧಾನಮಂತ್ರಿ ಮೋದಿ ಅವರ ಯೋಜನೆಯಾಗಿದೆ. ಇತರರು ಗೋಡೆಗಳನ್ನು ನಿರ್ಮಿಸಿದಾಗ, ಭಾರತವು ಸಾಮರ್ಥ್ಯವನ್ನು ನಿರ್ಮಿಸುತ್ತದೆ. ಇತರರು ಅವಕಾಶವನ್ನು ಬಿಟ್ಟುಕೊಟ್ಟಾಗ, ಭಾರತವು ಅಂತಹ ಅವಕಾಶಗಳನ್ನು ಬಳಸಿಕೊಳ್ಳುತ್ತದೆ. ಈ ರೀತಿಯಾಗಿ ಜನರ ಆತ್ಮವಿಶ್ವಾಸವು ಆಧುನಿಕ ಸ್ಪರ್ಧಾತ್ಮಕತೆ-ಯ ಅನುಕೂಲತೆಯಾಗಿ ಮಾರ್ಪಡುತ್ತದೆ. ದೀಪಾವಳಿ ಸಮೀಪಿಸುತ್ತಿದ್ದಂತೆ,ಹನುಮಂತನ ಜಿಗಿತವು ಸಮುದ್ರದ ದೂರವನ್ನು ಕಡಿಮೆ ಮಾಡಲಿಲ್ಲ ಬದಲಿಗೆ ಅವನ ಆತ್ಮವಿಶ್ವಾಸವನ್ನು ಹೆಚ್ಚಿಸಿತು ಎಂಬುದನ್ನು ನೆನಪಿಸಿಕೊಳ್ಳುವುದು ಮುಖ್ಯವಾಗಿದೆ. ಜಗತ್ತು ಎಷ್ಟೇ ಹೊಸ ಅಡೆತಡೆಗಳನ್ನು ಸೃಷ್ಟಿಸಬಹುದು, ಆದ-ರೆ ಭಾರತವು ಇಂದು ನಾಯಕತ್ವ, ಸದೃಢತೆ ಮತ್ತು ಉತ್ತುಂಗಕ್ಕೆ ಏರುವ ಅಚಲ ಗುರಿಯನ್ನು ಹೊಂದಿದೆ. ಪ್ರಧಾನಮಂತ್ರಿ ಮೋದಿ ಅವರ ದೂರದೃಷ್ಟಿಯ ಮಾರ್ಗದರ್ಶನದಲ್ಲಿ ಭಾರತವು ತೀರದಲ್ಲಿ ನಿಲ್ಲುವುದಿಲ್ಲ. ಅದು ತನ್ನ ಶಕ್ತಿಯನ್ನು ನೆನಪಿಸಿಕೊಳ್ಳುತ್ತದೆ ಮತ್ತು ಮುಂದೆ ಜಿಗಿಯುತ್ತದೆ.



**। ಹರ್ ದೀಪ್ ಎಸ್ ಪುರಿ**
**ಲೇಖಕರು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವರು.**

## ಇಂದಿನ ದಿನಗಳಲ್ಲಿ ಸಂವಹನ ಕೌಶಲ್ಯ ಅಗತ್ಯ: ಪ್ರೊ. ಬಿ.ಎಲ್. ಲಕ್ಕಣ್ಣವರ

**ವಿಜಯಪುರ :** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿವಿಧ ಭಾಷೆಗಳ ಜ್ಞಾನ ಹಾಗೂ ಸಂವಹನ ಕೌಶಲ್ಯಗಳನ್ನು ಸಂಪಾದಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಮಹಿಳಾ ವಿವಿಯ ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್.ಲಕ್ಕಣ್ಣವರ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದಲ್ಲಿ ಕಲಾ ನಿಕಾಯದ ವತಿಯಿಂದ ಇತ್ತೀಚೆಗೆ ಆಯೋಜಿಸಿದ್ದ 'ಸಂವಹನ ಕೌಶಲ್ಯ ಹಾಗೂ ವ್ಯಕ್ತಿತ್ವ ವಿಕಸನ: ಭಾಷಾ ಅಧ್ಯಯನದ ಮಹತ್ವ' ಎಂಬ ವಿಷಯದ ಕುರಿತ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.




ಕೌಶಲಗಳು ವ್ಯಕ್ತಿತ್ವ ವಿಕಸನಕ್ಕೆ ದಾರಿಯಾಗುತ್ತವೆ. ವಿದ್ಯಾರ್ಥಿನಿಯರು ತಮ್ಮ ಸಾಮರ್ಥ್ಯವನ್ನು ಅರಿತು-ಕೊಂಡು, ಕೌಶಲಗಳನ್ನು ಬೆಳೆಸಿಕೊಂಡು, ಹೊಸ ಜಗತ್ತಿನ ಸವಾಲುಗಳು ಮತ್ತು ಅವಕಾಶಗಳನ್ನು ಆತ್ಮವಿಶ್ವಾಸದಿಂದ ಎದುರಿಸಲು ಸಜ್ಜಾಗಬೇಕು ಎಂದರು.

ಇದೇ ಸಂದರ್ಭದಲ್ಲಿ ನಿವೃತ್ತ ಪ್ರಾಚಾರ್ಯ ಡಾ.ಆರ್.ಜಿ.ಹೆಗಡೆ ಮಾತನಾಡಿ, ವಿದ್ಯಾರ್ಥಿಗಳು ವೃತ್ತಿಪರ ಕೌಶಲದ ಜೊತೆಗೆ ವ್ಯಕ್ತಿತ್ವದ ಕೌಶಲವನ್ನೂ ಮೈಗೂಡಿಸಿಕೊಳ್ಳಬೇಕು. ಉತ್ತಮ ಕೌಶಲಗಳು ಜೀವನದಲ್ಲಿ ಯಶಸ್ಸು ಮತ್ತು ಸಮೃದ್ಧಿಯನ್ನು ತರಲು ನೆರವಾಗುತ್ತವೆ. ಕೌಶಲಗಳ ಅಭಿವೃದ್ಧಿಯ ಮೂಲಕ ವ್ಯಕ್ತಿ ತನ್ನ ಭವಿಷ್ಯವನ್ನು ನಿರ್ಮಿಸಿಕೊಳ್ಳಬಹುದು ಎಂದರು.

ಕಾರ್ಯಾಗಾರದಲ್ಲಿ ನಿವೃತ್ತ ಪ್ರಾಧ್ಯಾಪಕ ಡಾ.ಅಮೃತ ಯಾರ್ದಿ ಮಾತನಾಡಿ, ಭಾಷೆಗಳ ಅಭ್ಯಾಸದಿಂದ ವ್ಯಕ್ತಿತ್ವವು ಪರಿಪೂರ್ಣವಾಗಿ ರೂಪುಗೊಳ್ಳುತ್ತದೆ. ವ್ಯಕ್ತಿತ್ವ ವಿಕಸನಕ್ಕಾಗಿ ಬಹುಭಾಷಿತ್ವ ಅತ್ಯಂತ ಮಹತ್ವದ್ದಾಗಿದೆ. ಅನೇಕ ಭಾಷೆಗಳ ಜ್ಞಾನ ಹೊಂದಿರುವವರು ತಮ್ಮ ಸಂವಹನ ಕೌಶಲದ ಮೂಲಕ ಪರರಾಜ್ಯಗಳಲ್ಲಿಯೂ, ಪರದೇಶಗಳಲ್ಲಿಯೂ ಸಹ ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಲು ಸಾಧ್ಯ ಎಂದರು.

ಕನ್ನಡ ವಿಭಾಗದ ಹಿರಿಯ ಪ್ರಾಧ್ಯಾಪಕ ಪ್ರೊ. ಮಹೇಶ ಚಿಂತಾಮಣಿ, ಕಲಾ ನಿಕಾಯದ ವಿವಿಧ ವಿಭಾಗಗಳ ಪ್ರಾಧ್ಯಾಪಕರಾದ ಪ್ರೊ.ನಾಮದೇವ ಗೌಡ, ಪ್ರೊ.ಎಂ. ನಾಗರಾಜ, ಡಾ. ನಾರಾಯಣ ಪವಾರ, ಡಾ ದೀಪಕ ಶಿಂದೆ, ಡಾ.ಅಮರನಾಥ್ ಪ್ರಜಾಪತಿ, ಡಾ. ಅಕ್ಷಯ ಯಾರ್ದಿ, ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದ ಸಂಯೋಜಕಿ ಹಾಗೂ ಕಲಾ ನಿಕಾಯದ ಡೀನ್ ಪ್ರೊ.ರಾಜು ಬಾಗಲಕೋಟ ಸ್ವಾಗತಿಸಿದರು. ಹಿಂದಿ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಗುಲಾಬ ರಾಠೋಡ ವಂದಿಸಿದರು.

## ಶ್ರೀ ಸಿದ್ದೇಶ್ವರ ಬ್ಯಾಂಕ್: ಹಳೆ ಬಣಕ್ಕೆ ಗೆಲುವು



**ವಿಜಯಪುರ :** ನಗರದ ಪ್ರತಿಷ್ಠಿತ ಶ್ರೀ ಸಿದ್ದೇಶ್ವರ ಸಹಕಾರ ಬ್ಯಾಂಕಿನ 2025?30ನೇ ಸಾಲಿನ ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ 19 ಕ್ಷೇತ್ರಗಳಲ್ಲಿ ಹಳೆ ಪೆನಾಲ್ ಎಲ್ಲ ಕ್ಷೇತ್ರಗಳಲ್ಲೂ ಜಯ ಗಳಿಸಿ, ಮತ್ತೊಮ್ಮೆ ಆಡಳಿತ ಚುಕ್ಕಾಣಿ ಹಿಡಿದಿದೆ.

ಸಾಮಾನ್ಯ ಕ್ಷೇತ್ರಕ್ಕೆ ನಡೆದ ಚುನಾವಣೆಯಲ್ಲಿ ಗುರುಪಾದಯ್ಯ (ಗುರು) ಗಚ್ಚಿನಮಠ (4791), ಶ್ರೀಹರ್ಷ ಪಾಟೀಲ(4396), ಈರಣ್ಣ ಪಟ್ಟಣಶೆಟ್ಟಿ(4072), ಕರುಣಾ ಔರಂಗಬಾದ್ (4054), ಸುರೇಶ ಗುರುಲಿಂಗಪ್ಪ ಗಚ್ಚಿನಕಟ್ಟಿ (4053), ವಿಜಯಕುಮಾರ ಇಜೇರಿ(3739), ಡಾ.ಸಂಜೀವ ಪಾಟೀಲ (3665), ವೈಜನಾಥ ಕರ್ಪೂರಮಠ (3632), ವಿಶ್ವನಾಥ ಪಾಟೀಲ (ಮಸಬಿನಾಳ) (3627), ರಾಜೇಂದ್ರ ಪಾಟೀಲ (ಉಪ್ಪಲದಿನ್ನಿ) (3624), ರಮೇಶ ಬಿದನೂರ(3615), ರವೀಂದ್ರ ಬಿಜ್ಜರಗಿ (3511) ಮತ್ತು ಪ್ರಕಾಶ ಬಗಲಿ (3417) ಆಯ್ಕೆಯಾಗಿದ್ದಾರೆ.

ಮಹಿಳಾ ಕ್ಷೇತ್ರಕ್ಕೆ ಬೋರಮ್ಮ ಗೊಬ್ಬರ(3122) ಮತ್ತು ಸೌಭಾಗ್ಯ ಭೋಗಶೆಟ್ಟಿ (3975), ಹಿಂದುಳಿದ ಪ್ರವರ್ಗ 1 ಗುರುರಾಜ ಗಂಗನಳ್ಳಿ (3990), ಹಿಂದುಳಿದ ಪ್ರವರ್ಗ 1 ರಾಜಶೇಖರ ಕತ್ತಿ (2383), ಪರಿಶಿಷ್ಟ ಜಾತಿ ಸಾಯಬಣ್ಣ ಭೋವಿ (2865), ಪರಿಶಿಷ್ಟ ಪಂಗಡ ಅಮೋಘಸಿದ್ದ ನಾಯ್ಕೋಡಿ (3806) ಆಯ್ಕೆಯಾಗಿದ್ದಾರೆ.

ಚುನಾವಣೆ ಫಲಿತಾಂಶ ಪ್ರಕಟವಾಗುತ್ತಿದ್ದಂತೆ ಅಭಿಮಾನಿಗಳು ಬ್ಯಾಂಕಿನ ಎದುರು ಭಾನುವಾರ ತಡರಾತ್ರಿಯೇ ಪಟಾಕಿ ಸಿಡಿಸಿ, ಗುಲಾಲ್ ಎರಚಿ, ಸಿಹಿ ಹಂಚಿದರು.

ನೂತನ ನಿರ್ದೇಶಕರಿಗೆ ಮಾಲಾರ್ಪಣೆ ಜೊತೆಗೆ ಮೆರವಣಿಗೆ ಮಾಡಿದರು.

# ತ್ವರಿತವಾಗಿ ಬೆಳೆ ಹಾನಿ ಪರಿಹಾರ ನೀಡಲು ಬಿಜೆಪಿ ರೈತ ಮೋರ್ಚಾ ನಿಯೋಗ ಜಿಲ್ಲಾಧಿಕಾರಿಗಳಿಗೆ ಮನವಿ

**ವಿಜಯಪುರ:** ಜಿಲ್ಲಾ ಬಿಜೆಪಿ ರೈತ ಮೋರ್ಚಾ ವತಿಯಿಂದ ಜಿಲ್ಲಾಧಿಕಾರಿಗಳಿಗೆ ಭೇಟಿ ಮಾಡಿ ಬೆಳೆ ಪರಿಹಾರವನ್ನು ಕೂಡಲೇ ನೀಡಬೇಕೆಂದು ಸೋಮವಾರ ಸಂಜೆ ಮನವಿ ಸಲ್ಲಿಸಲಾಯಿತು.

ರಾಜ್ಯದಲ್ಲಿ ಯಾವುದೇ ಜಿಲ್ಲೆಯಲ್ಲಿ ಆಗದಷ್ಟು ವಾಡಿಕೆಗಿಂತ ಹೆಚ್ಚಿನ ಮಳೆ ವಿಜಯವುರ ಜಿಲ್ಲೆಯಲ್ಲಿ ಆಗಿದೆ ವರದಿಗಳ ಪ್ರಕಾರ ವಾಡಿಕೆ ಗಿಂತ ಶೇ 150 ಕ್ಕೂ ಹೆಚ್ಚು ಮಳೆಯಾಗಿದೆ ಎಂದು ತಿಳಿದು ಬಂದಿರುತ್ತದೆ. ವಿಜಯಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಬಿತ್ತನೆ ಮಾಡಿದ 7.50 ಲಕ್ಷ ಹೆಕ್ಟರ್ ಪ್ರದೇಶದ ಬೆಳೆ ಸಂಪೂರ್ಣ ನಾಶವಾಗಿದೆ. ಮೂರು ತಿಂಗಳಿನಿಂದ ನಿರಂತರ ಮಳೆಯಿಂದಾಗಿ ಆಗಿರುವ ಬೆಳೆ ಹಾನಿಯನ್ನು ಪ್ರಕೃತಿ ವಿಕೋಪದಿಂದ ಆಗಿರುವ ಬೆಳೆಹಾನಿ ಎಂದು ಪರಿಗಣಿಸಿ ಸರಕಾರಕ್ಕೆ ನೈಜ ಮತ್ತು ವಾಸ್ತವ ವರದಿಯನ್ನು ಸಲ್ಲಿಸಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

"ಇದು ಭೀಮಾನದಿಯಿಂದ ಆಗಿರುವ ಪ್ರವಾಹ ಹಾಗೂ ಪ್ರಕೃತಿ ವಿಕೋಪದಿಂದ ಆಗಿರುವ ಹಾನಿ" ಒಂದಿಬ್ಬರು ತಳಮಟ್ಟದ ಅಧಿಕಾರಿಗಳನ್ನು ರೈತರ ಹೊಲಗಳಿಗೆ ಕಳುಹಿಸಿ ಸಂಪೂರ್ಣ ಬೆಳ ಹಾನಿಯ ಸಮೀಕ್ಷೆಯನ್ನು ಕಾಲಮಿತಿಯಲ್ಲಿ ಜಿಪಿಎಸ್ ಮೂಲಕ ಮಾಡಲು ಸಾಧ್ಯವಿಲ್ಲ. ಜಿಲ್ಲಾಧಿಕಾರಿಗಳು ನೇಮಿಸಿರುವ ಅಧಿಕಾರಿಗಳು ಪ್ರತಿ ತಾಲೂಕಿನಲ್ಲಿ ಒಂದೆರಡು ಹಳ್ಳಿಗಳ ಸಂಪೂರ್ಣ ಸಮೀಕ್ಷೆ ನಡೆಸಿ ಪಕೃತಿ ವಿಕೋಪದಿಂದಾದ ನೈಜ ಹಾನಿಯ ಬಗ್ಗೆ, ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ನಿರಂತರ ಮಳೆಯಿಂದಾಗಿರುವ ಬೆಳೆ ಹಾನಿಯ ನೈಜತೆಯನ್ನು ಮುಚ್ಚಿಟ್ಟು ಸಂಕಟದಲ್ಲಿರುವ ರೈತರ ಜೊತೆ ಚೆಲ್ಲಾಟ ಆಡದಂತೆ ಜಿಲ್ಲಾ ಆಡಳಿತಕ್ಕೆ ಈ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ. ಈ ಕೂಡಲೇ ವಿಜಯಪುರ ಜಿಲ್ಲೆಯ ರೈತರು ಬೆಳೆದ ಸುಮಾರು 7.50 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆಯನ್ನು ಪ್ರಕೃತಿ ವಿಕೋಪದಿಂದಾದ ಸಂಪೂರ್ಣ ನಷ್ಟವೆಂದು ಘೋಷಿಸಿ ಸರ್ಕಾರಕ್ಕೆ ಕೂಡಲೇ ವರದಿಯನ್ನು ಸಲ್ಲಿಸಬೇಕು ಎಂದು ಮನವಿಯಲ್ಲಿ ಕೇಳಿಕೊಳ್ಳಲಾಗಿದೆ.



ಪರಿಹಾರವನ್ನು ನಾವು ಸರ್ಕಾರಕ್ಕೆ ಕೇಳುತ್ತಿದ್ದೇವೆಯೇ ಹೊರತು ಜಿಲ್ಲಾಡಳಿತಕ್ಕಲ್ಲ. ಪರಿಹಾರ ಎಷ್ಟು ಕೊಡುತ್ತಾರೆ ಎನ್ನುವುದನ್ನು ಸರ್ಕಾರ ಮಟ್ಟದಲ್ಲಿ ತೀರ್ಮಾನಿಸಲಿ. ಮೊದಲು ವಾಸ್ತವ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಪ್ರತಿ ಗ್ರಾಮ, ಪ್ರತಿ ಗ್ರಾಮ ಪಂಚಾಯತ್ ಪ್ರತಿ ರೈತ ಸಂಪರ್ಕ ಕೇಂದ್ರಗಳಲ್ಲಿ ಬೆಳೆಹಾನಿಗೀಡಾದ ಎಲ್ಲಾ ರೈತರ ಪಟ್ಟಿಲಗತ್ತಿಸಬೇಕು. ಎಲ್ಲಿಯವರೆಗೆ ಈಬೇಡಿಕೆಈಡೇರುವುದಿಲ್ಲವೋಅಲ್ಲಿಯವರೆಗೆ ರೈತರು ಬೀದಿಗಿಳಿದು ಹೋರಾಟ ಮಾಡಲು ಸಿದ್ಧರಾಗಿದ್ದೇವೆ. ಸಂಕಷ್ಟದಲ್ಲಿರುವ ರೈತರಿಗೆ ಸಹಾಯ ಮಾಡುವುದು ಅಧಿಕಾರಿಗಳ ಆದ್ಯ ಕರ್ತವ್ಯ. ಸಹಾಯ ಮಾಡುವಂತೆ ಕೇಳುವುದು ರೈತರ ಕಾನೂನು ಬದ್ಧ ಹಕ್ಕು. ಈ ನಮ್ಮ ಮನವಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಡಳಿತ ಗಂಭೀರವಾಗಿ ಪರಿಗಣಿಸಬೇಕು. ನಿರ್ಲಕ್ಷ್ಯ ತೋರಿದಲ್ಲಿ ರೈತರಿಗೆ ಅನ್ಯಾಯ ಮಾಡುವ ಪ್ರಯತ್ನ ನಡೆದಲ್ಲಿ ಕಾನೂನನ್ನು ಮೀರಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ. ಶಾಂತಿಭಂಗವಾದಲ್ಲಿ ಅದಕ್ಕೆ ಜಿಲ್ಲಾಡಳಿತವೇ ಹೊಣೆಯಾಗುತ್ತದೆ ವಿನ: ಪ್ರತಿಭಟನೆಗೆ ಇಳಿದ ರೈತರನ್ನು ಹೊಣೆ ಮಾಡಲು ಸಾಧ್ಯವಿಲ್ಲವೆಂದು ಈ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ. ಕೂಡಲೇ ಬೇಡಿಕೆ ಈಡೇರಿಸದಿದ್ದಲ್ಲಿ ಆಯಾ ಗ್ರಾಮ. ಗ್ರಾಮ ವಂಚಾಯತ್, ಹೋಬಳಿ ಹಾಗೂ ತಾಲೂಕಾ ಕೇಂದ್ರಗಳಲ್ಲಿರುವ ಸರ್ಕಾರಿ ಕಛೇರಿಗಳ ಮುಂದೆ ಪ್ರತಿಭಟನೆ ಮತ್ತು ಆಯಾ ಗ್ರಾಮಗಳಲ್ಲಿ ಹಾಯ್ದು ಹೋಗುವ ಮುಖ್ಯ ರಸ್ತೆಗಳಲ್ಲಿ ರಸ್ತೆ ತಡೆ ನಡೆಸುವುದರ ಮೂಲಕ ಬೇಡಿಕೆ ಈಡೇರುವವರೆಗೆ ನಿರಂತರ ಹೋರಾಟ ನಡೆಸುವುದಾಗಿ ಈ ಮೂಲಕ ಸರ್ಕಾರಕ್ಕೆ ಹಾಗೂ ಜಿಲ್ಲಾಡಳಿತಕ್ಕೆ ತಿಳಿಯಪಡಿಸುತ್ತಿದ್ದೇವೆ. ಹೋರಾಟದ ಸಂದರ್ಭದಲ್ಲಿ ಪೋಲಿಸ್ ಅಧಿಕಾರಿಗಳು ರೈತರ ಮೇಲೆ ದರ್ಪ ತೋರುವುದಾಗಲಿ, ಲಾಠಿ ಎತ್ತುವುದಾಗಲಿ ಹಾಗೂ ಹಿಂಸೆಗೆ ಪ್ರಚೋದನೆ ನೀಡುವ ಕೆಲಸ ಮಾಡಿದಲ್ಲಿ ರೈತರು ತಕ್ಕ ಪ್ರತ್ಯುತ್ತರವನ್ನು ನೀಡಬೇಕಾಗುತ್ತದೆ ಎಂದು ವಿನಮ್ರವಾಗಿ ಎಚ್ಚರಿಸುತ್ತಿದ್ದೇವೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಈ ಸಂದರ್ಭದಲ್ಲಿ ಸಂಸದ ರಮೇಶ ಜಿಗಜಿಣಗಿ, ಮಾಜಿ ಶಾಸಕ, ರೈತ ಮೋರ್ಚಾ ರಾಜ್ಯ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ, ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮಾಜಿ ಸಚಿವ ಎಸ್.ಕೆ. ಬೆಳ್ಳುಬ್ಬಿ. ಮಾಜಿ ಶಾಸಕರಾದ ಸೋಮನಗೌಡ ಪಾಟೀಲ ಸಾಸನೂರ, ರಮೇಶ ಭೂಸನೂರ, ಮುಖಂಡರಾದ ವಿಜುಗೌಡ ಪಾಟೀಲ, ಸಂಜಯ ಐಹೊಳೆ, ಈರಣ್ಣ ರಾವೂರ್, ವಿಜಯ ಜೋಶಿ, ವಿಕಾಸ ಪದಕಿ ಮತ್ತಿತರರು ಇದ್ದರು.

# ಡಾಗ್ ಶೆಲ್ಟರ್ ನಿರ್ಮಾಣಕ್ಕೆ ಕ್ರಮ ವಹಿಸಿ: ಜಿಲ್ಲಾಧಿಕಾರಿ ಡಾ.ಆನಂದ ಕೆ. ಸೂಚನೆ



**ವಿಜಯಪುರ :** ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಬೀದಿ ನಾಯಿಗಳಿಗೆ ಆಶ್ರಯ ಒದಗಿಸಲು ಬುರಾಣಪುರದಲ್ಲಿ ಕಾಯ್ದಿರಿಸಿದ ಎರಡು ಎಕರೆ ಜಾಗದಲ್ಲಿ ಡಾಗ್ ಶೆಲ್ಟರ್ ನಿರ್ಮಾಣಕ್ಕಾಗಿ ನೀಲ ನಕ್ಷೆ ತಯಾರಿಸಿ ಸಲ್ಲಿಸುವಂತೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ ಉಪನಿರ್ದೇಶಕರಿಗೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಸೂಚನೆ ನೀಡಿ-ದ್ದಾರೆ.

ಸೋಮವಾರ ನಗರದ ಬುರಾಣಪುರದಲ್ಲಿರುವ ಗೋಶಾಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಂತರ, ಡಾಗ್ ಶೆಲ್ಟರ್ ನಿರ್ಮಾಣಕ್ಕೆ ಸೂಚನೆ ನೀಡಿ, ಗೋಶಾಲೆಗಳಲ್ಲಿರುವ ಜಾನುವಾರುಗಳನ್ನು ಕಾಳಜಿಯಿಂದ ನೋಡಿಕೊಳ್ಳುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ನಗರದಲ್ಲಿರುವ ಪಶುಪಾಲನಾ ಇಲಾಖೆ ಕಚೇರಿಗೆ ಭೇಟಿ ನೀಡಿದ ಅವರು, ಬೀದಿ ನಾಯಿಗಳ ಸಂತಾನ ಹರಣಶಸ್ತ್ರ ಚಿಕಿತ್ಸಾ ಕಾರ್ಯಕ್ರಮದ ಕಟ್ಟಡವನ್ನು ನವೀಕರಿಸಲು ಮಹಾನಗರ ಪಾಲಿಕೆ ಆಯುಕ್ತರಿಗೆ ಸೂಚಿಸಿದ ಅವರು, ಪಾಲಿ ಕ್ಲಿನಿಕ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಂದರ್ಭದಲ್ಲಿ ಜಾನುವಾರು ಚಿಕಿತ್ಸೆ, ನಾಯಿ ಮತ್ತು ಬೆಕ್ಕುಗಳ ಚಿಕಿತ್ಸೆ ಮತ್ತು ಶಸ್ತ್ರಚಿಕಿತ್ಸಾ ಕೊಠಡಿ, ರಕ್ತದ ಮಾದರಿಗಳನ್ನು ಪರೀ-ಕ್ಷೆ ಮಾಡುವುದನ್ನು ಸಂಬಂಧಿಸಿದ ಪಶುವೈದ್ಯರು ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಆಯುಕ್ತ ವಿಜಯ ಮೆಕ್ಕಳಕಿ, ಪಶುಪಾಲನಾ ಇಲಾಖೆ ಉಪನಿರ್ದೇಶಕ ಅಶೋಕ ಘೋಣಸಗಿ, ಪಾಲಿ ಕ್ಲಿನಿಕ್ ಉಪನಿರ್ದೇಶಕ ಡಾ. ವಿ.ಎನ್. ಹಾಸಂಗಿಹಾಳ, ಅಮೋಘ ತಳವಾರ ಸೇರಿದಂತೆ ವಿವಿಧ ಅಧಿಕಾರಿ-ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಕಿವಿ ಶಸ್ತ್ರ ಚಿಕಿತ್ಸೆ ಯಶಸ್ವಿ



**ವಿಜಯಪುರ :** ನಗರದ ಬಿ.ಎಲ್.ಡಿ.ಇ ಡಿಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ಮೆಡಿಕಲ್ ಕಾಲೇಜ ಆಸ್ಪತ್ರೆಯ ಕಿವಿ,ಮೂಗು ಹಾಗೂ ಗಂಟಲು ವಿಭಾಗದಲ್ಲಿ ಹುಟ್ಟು ಶ್ರವಣ ದೋಷದಿಂದ ಬಳಲುತ್ತಿದ್ದ ಎರಡು ವರ್ಷದೊಳಗಿನ ಇಬ್ಬರು ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಅತ್ಯಾಧುನಿಕ ಕಿವಿಯ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಮಾಡಲಾಗಿದೆ.

ಸುವರ್ಣಆರೋಗ್ಯಸುರಕ್ಷಾಯೋಜನೆಯಡಿ ಗುರುವಾರ ಈ ಶಸ್ತ್ರಚಿಕಿತ್ಸೆ ನಡೆಸಲಾಗಿದ್ದು, ಈ ಯೋಜನೆಡಿ ಆಸ್ಪತ್ರೆಯಲ್ಲಿ ಈವರೆಗೆ ಐದು ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ನಡೆಸಿದಂತಾಗಿದೆ. ಅಲ್ಲದೇ, ಈ ಮಕ್ಕಳು ಈಗಾಗಲೇ ಮಾತನಾಡುವುದ ಪ್ರಕ್ರಿಯೆ ಪ್ರಾರಂಭವಾಗಿದೆ.

ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಈ ಯೋಜನೆಯಡಿ ಮೂರು ವರ್ಷದ ಒಳಗಿನ ಹುಟ್ಟು ಕಿವುಡ ಮಕ್ಕಳಿಗೆ ಈ ಶಸ್ತ್ರಚಿಕಿತ್ಸೆ ಲಭ್ಯವಿದ್ದು ರೂ. 6 ಲಕ್ಷ ವೆಚ್ಚದ ಕಿವಿಯ ಇಂಪ್ಲಾಂಟನ್ನು ಒಳಕಿವಿಗೆ ಅಳವಡಿಸಬಹುದಾಗಿದೆ. ನಂತರ ಎರಡು ವರ್ಷ ವಾಕ್ ಶ್ರವಣ ತರಬೇತಿಯನ್ನು ಕೊಡಲಾಗುತ್ತದೆ. ಸಾರ್ವಜನಿಕರು ಈ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದು ವೈದ್ಯಕೀಯಆಸ್ಪತ್ರೆಯವೈದ್ಯಕೀಯಅಧೀಕ್ಷಕ ಡಾ. ರಾಜೇಶ್ ಹೊನ್ನುಟಗಿತಿಳಿಸಿದ್ದಾರೆ.

ಯಾವುದೇ ಮಗು ಶಬ್ದಗಳಿಗೆ ಸ್ಪಂದಿಸದಿದ್ದರೆ ಮೂರು ತಿಂಗಳ ಒಳಗೆ ಆಸ್ಪತ್ರೆಗೆ ಬಂದು ತಪಾಸಣೆ ಮಾಡಿಸಬೇಕು ಮತ್ತು ಶ್ರವಣದೋಷ ಕಂಡುಬಂದರೆ ಒಂದೂವರೆ ವರ್ಷದೊಳಗೆ ಚಿಕಿತ್ಸೆ ಮಾಡಿಸಿದರೆ ಮಗು ಇತರ ಮಕ್ಕಳಂತೆ ಪೂರ್ಣವಾಗಿ ಮಾತನಾಡುವುದನ್ನು ಕಲಿತು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಬಹುದಾಗಿದೆ. ಅಲ್ಲದೇ, ಸಮಾಜದ ಮುಖ್ಯವಾಹಿನಿಗೆ ಸೇರಲು ಅನಕುಲವಾಗುತ್ತದೆ. ಆದರೆ, ಮೂರು ವರ್ಷದ ನಂತರ ಚಿಕಿತ್ಸೆ ಬಯಸಿದರೆ ಆ ಮಗುವಿಗೆ ಸರಕಾರದ ಈ ಉಚಿತ ಯೋಜನೆ ಸೌಲಭ್ಯ ಇರುವುದಿಲ್ಲ. ಬಿ.ಎಲ್.ಡಿ.ಇ ಆಸ್ಪತ್ರೆಯಲ್ಲಿ ಖಾಸಗಿಯಾಗಿಯೂ ಈ ಶಸ್ತ್ರಚಿಕಿತ್ಸೆ ಲಭ್ಯವಿದೆ. ಯಾವುದೇ ಮಗುವಿಗೆ ಈ ತರಹದ ಶಸ್ತ್ರಚಿಕಿತ್ಸೆ ಎರಡು ವರ್ಷದೊಳಗೆ ಮಾಡಿಸಿದರೆ ಮಾತ್ರ ಅತ್ಯಂತ ಒಳ್ಳೆಯ ಫಲಿತಾಂಶ ಸಿಗುತ್ತದೆ.

ಆದರೆ ಐದು ವರ್ಷದ ನಂತರ ಶಸ್ತ್ರಚಿಕಿತ್ಸೆಯಾದರೂ ಮಗುವಿಗೆ ಕೇವಲ ಶಬ್ದ ಕೇಳುತ್ತದೆ ಹೊರತು ಮಾತುಗಳು ಅರ್ಥವಾಗುವ ಶಕ್ತಿ ಇರದ ಕಾರಣ ಮಾತನಾಡಲು ಬರುವುದಿಲ್ಲ ಎಂದು ಕಾಕ್ಲಿಯರ್ ಇಂಪ್ಲಾಂಟ್ ಸರ್ಜನ್ ಮತ್ತು ಇಂಪ್ಲಾಂಟ್ ಕೋ-ಆರ್ಡಿನೇಟರ್ ಡಾ. ಎಚ್. ಟಿ. ಲತಾದೇವಿ ತಿಳಿಸಿದ್ದಾರೆ.

2025ರ ಜನವರಿಯಿಂದಲೇ ಈ ಯೋಜನೆ ನಮ್ಮ ಆಸ್ಪತ್ರೆಯಲ್ಲಿ ಪ್ರಾರಂಭವಾಗಿದ್ದು, ನಮ್ಮಲ್ಲಿ ಎಲ್ಲ ನವಜಾತಶಿಶುಗಳನ್ನು ಶ್ರವಣ ಪರೀಕ್ಷೆಗಳಿಗೆ ಒಳಪಡಿಸಿ ಹುಟ್ಟು ಕಿವುಡತನ ಪತ್ತೆಹಚ್ಚುವ ಸೌಲಭ್ಯ ಹಾಗೂ ಶಸ್ತ್ರಚಿಕಿತ್ಸೆಯು ಲಭ್ಯವಿರುವುದರಿಂದ ಜನ ಸಾಮಾನ್ಯರು ಈ ಯೋಜನೆಯನ್ನು ಉಪಯೋಗಿಸಬೇಕು ಎಂದು ಕುಲಪತಿ ಡಾ. ಅರುಣ ಚಂ. ಇನಾಮದಾರ ತಿಳಿಸಿದ್ದಾರೆ.

ಬಿ.ಎಲ್.ಡಿ.ಇ ಆಸ್ಪತ್ರೆಯ ವೈದ್ಯರ ಈ ಯಶಸ್ವಿ ಶಸ್ತ್ರಚಿಕಿತ್ಸೆಗೆ ಕಾಲೇಜಿನ ಪ್ರಾಚಾರ್ಯೆ ಡಾ. ತೇಜಶ್ವಿನಿ ವಲಭ, ಸೂಪರ್ ಸ್ಪೇಷಾಲಿಟಿ ಆಸ್ಪತ್ರೆ ವೈದ್ಯಕೀಯ ನಿರ್ದೇಶಕ ಡಾ. ವಿಜಯಕುಮಾರ ಕಲ್ಯಾಣಪ್ಪನವರ ಅವರು ಎಚ್. ಟಿ. ಲತಾದೇವಿ ಮತ್ತು ಡಾ. ವಾಸಂತಿ ಆನಂದ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

# ದುಬಾರಿ ಅರ್ಜಿ ಶುಲ್ಕ ಕೈಬಿಡಲು ಆಗ್ರಹ



**ವಿಜಯಪುರ:** ವಿವಿಧ ಹುದ್ದೆಗಳಿಗೆ ನೇಮಕ ಸಂಬಂಧ ಕೆ.ಇ ಎ. ಅಧಿಸೂಚನೆ ಹೊರಡಿಸಿ, ನಿಗದಿಪಡಿಸಿರುವ ದುಬಾರಿ ಅರ್ಜಿ ಶುಲ್ಕವನ್ನು ಕೈಬಿಡಬೇಕು ಹಾಗೂ ಖಾಲಿ ಹುದ್ದೆಗಳ ಭರ್ತಿ ಮಾಡಬೇಕು ಎಂದು ಆಗ್ರಹಿಸಿ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿಯಿಂದ ಸೋಮವಾರ ಪ್ರತಿಭಟಿಸಲಾಯಿತು.

ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಲ್ಲಿ 2.86 ಲಕ್ಷಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ.ಆದರೆ, ಈಗ ಕೇವಲ 708 ಹುದ್ದೆಗಳನ್ನು ಮಾತ್ರ ನೇಮಕಾತಿ ಮಾಡಲು ಅಧಿಸೂಚನೆ ಹೊರಡಿಸಲಾಗಿದೆ.5ರಿಂದ8 ಇಲಾಖೆ/ನಿಗಮ/ಮಂಡಳಿಗಳಲ್ಲಿ ಕರೆಯಲಾಗಿರುವ ಈ ಸೀಮಿತ ಹುದ್ದೆಗಳಿಗೆ ಒಬ್ಬ ಅಬ್ಯರ್ಥಿಯು ಅರ್ಜಿ ಸಲ್ಲಿಸಲು ಕನಿಷ್ಠ 750 ಹಾಗೂ ಗರಿಷ್ಠ 2ಸಾವಿರಗಳಷ್ಟು ಅರ್ಜಿ ಶುಲ್ಕ ಪಾವತಿಸಬೇಕಿದೆ.

ಈ ದುಬಾರಿ ಶುಲ್ಕವನ್ನು ಕೂಡಲೇ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಕಳೆದ ಹಲವಾರು ವರ್ಷಗಳಿಂದಲೂ ನೇಮಕಾತಿ ಇಲ್ಲದಿದ್ದರೂ ಚಾತಕ ಪಕ್ಷಿಯಂತೆ ನೇಮಕಾತಿಗಾಗಿ ಕಾಯುತ್ತಾ,ಸಾವಿರಾರುರೂಪಾಯಿಗಳನ್ನುಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆ ಉದ್ಯೋಗಾಕಾಂಕ್ಷಿಗಳು ಖರ್ಚು ಮಾಡಿಕೊಂಡಿದ್ದಾರೆ. ಹಗಲಿರುಳು ಕೂಲಿ ಮಾಡಿ, ಸಾಲ ಮಾಡಿ ಅವರ ಪೋಷಕರು ಅವರಿಗೆ ಓದಲು ಸಹಕಾರ ನೀಡಿದ್ದಾರೆ. ಆದರೆ, ಈಗ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ಅಲ್ಪ-ಸ್ವಲ್ಪ ಹುದ್ದೆಗಳಿಗೆ ಅರ್ಜಿ ಕರೆದು, ಬಡ ಉದ್ಯೋಗಾಕಾಂಕ್ಷಿಗಳಿಂದಲೇ ಅರ್ಜಿ ಶುಲ್ಕದ ಹೆಸರಲ್ಲಿ ಕೋಟ್ಯಾಂತರ ಹಣ ದೋಚಲು ಸರ್ಕಾರ ಮುಂದಾಗಿರುವುದು ವಿದ್ಯಾರ್ಥಿ-ಯುವಜನ ವಿರೋಧಿ ಕ್ರಮವಾಗಿದೆ ಎಂದು ಆರೋಪಿಸಿದರು.

ಕೂಡಲೇ ಈ ದುಬಾರಿ ಅರ್ಜಿ ಶುಲ್ಕವನ್ನು ಕೈಬಿಡಬೇಕು ಹಾಗೂ ಖಾಲಿ ಇರುವ ಲಕ್ಷಾಂತರ ಹುದ್ದೆಗಳನ್ನು ಒಮ್ಮೆಲೆ ಭರ್ತಿ ಮಾಡಿಕೊಳ್ಳಬೇಕು ಹಾಗೂ ನೇಮಕಾತಿಗಾಗಿ ನಡೆಯುವ ಎಲ್ಲ ಸ್ಪರ್ಧಾತ್ಮಕ ಪರಿಕ್ಷೆಗಳನ್ನು ಭ್ರಷ್ಟಾಚಾರ ಮುಕ್ತವಾಗಿ, ಪಾರದರ್ಶಕವಾಗಿ ನಡೆಸಬೇಕು ಎಂದು ಆಗ್ರಹಿಸಿದರು.

# ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಗಳು: ಬಡವರಿಗೆ ಆರ್ಥಿಕ ಸಬಲರನ್ನಾಗಿ ಮಾಡಿವೆ:ಶಾಸಕ ಯಶವಂತರಾಯಗೌಡ ಪಾಟೀಲ




**ಇಂಡಿ:** ಧರ್ಮಸ್ಥಳ ಕ್ಷೇತ್ರದ ಸಾರ್ವಜನಿಕ ವಲಯಗಳಲ್ಲಿ ಬಡವರಿಗೆ ಉದ್ಯೋಗ ನೀಡುವ ಮೂಲಕ ಆರ್ಥಿಕವಾಗಿ ಸಬಲರನ್ನಾಗಿ ಮಾಡಿದ್ದಾರೆ ಎಂದು ಶಾಸಕ ಯಶವಂತಯರಾಯಗೌಡ ಪಾಟೀಲ ಹೇಳಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ .ಬಿ.ಸಿ ಟ್ರಸ್ಟ್(ರಿ)ವಿಜಯಪೂರಅಖೀಲಕರ್ನಾಟಕ ಜನಜಾಗೃತಿ ವೇದಿಕೆ ಮಧ್ಯಪಾನ ಸಯಂ ಮಂಡಳಿ ಬೆಂಗಳೂರು ಸಹಕಾರದಲ್ಲಿ ಹಮ್ಮಿಕೊಂಡ ಗಾಂಧಿ ಜಯಂತಿ ಹಾಗೂ ವ್ಯಸನ ಮುಕ್ತ ಸಮಾಜ ನಿರ್ಮಾಣ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು ಧರ್ಮಸ್ಥಳ ಕ್ಷೇತ್ರ ಅತ್ಯೆಂತ ಪವಿತ್ರಕ್ಷೇತ್ರವಾಗಿದ್ದು ಕೆಲ ದಿನಗಳ ಹಿಂದೆ ಅನೇಕ ಅಪಾದನೆಗಳು ಬಂದಾಗ ನಮ್ಮ ಸರಕಾರದ ಮುಖ್ಯ ಮಂತ್ರಿಯಾದ ಸಿದ್ದರಾಮಯ್ಯ ಹಾಗೂ ಗೃಹಸಚಿವರಾದ ಜಿ.ಪರಮೇಶ್ವರ ಅವರು ನಿಷ್ಪಕ್ಷಪಾತ ತನಿಖೆಯಿಂದ ಧರ್ಮಸ್ಥಳ ಪವಿತ್ರ ಕ್ಷೇತ್ರ ಎಂದು ಸಾಭೀತು ಮಾಡಿದ್ದಾರೆ. ಇಂದು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವಿರೇಂದ್ರ ಹೆಗ್ಗಡೆಯವರು ಸಮಾಜಿಕ ಕ್ಷೇತ್ರದಲ್ಲಿ ಸಾಕಷ್ಟು ಶ್ರಮಿಸುತ್ತಿದ್ದಾರೆ. ಇಂದು ಆರ್ಥಿಕವಾಗಿ ದುರ್ಬಲರಿಗೆ ಬಡವರಿಗೆ ಎಷ್ಟೋ ಅನಾಥರಿಗೆ ಮೇಲೆ ಎತ್ತುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ .ಸರಕಾರಗಳು ಮಾಡದೆ ಇರುವ ಅನೇಕ ಕಾಯಕ ಧರ್ಮಸ್ಥಳದಿಂದ ನಡೆಯುತ್ತಿವೆ. ಸಮಾಜ ಪರಿಶುದ್ದವಾಗಲಿ ವ್ಯಸನ ಮುಕ್ತ ಸಮಾಜ ನಿರ್ಮಾಣ ಮಾಡುವ ಮೂಲಕ ಅವರ ಕುಟುಂಬಗಳು ನೆಮ್ಮದಿಯಿಂದ ಬದುಕಲಿ ಆರ್ಥಿಕ ಅಭಿವೃದ್ಧಿ ಹೊಂದಲಿ ಎಂದು ಜನರಲ್ಲಿ ಜಾಗೃತಿ ಮೂಡಿಸಿ ದುಶ್ಚಟಗಳಿಂದ ದೂರವಾಗಲಿ ಎಂದು ಪ್ರಚಾರ ಮಾಡುತ್ತಿದ್ದಾರೆ.

ನಾಡಿನಾದ್ಯಂತ ಅನೇಕ ಸಾಧು -ಸಂತರಲ್ಲಿ ಇಲ್ಲಕಲ್ ಶ್ರೀಮಹಾಂತ ಮಹಾಸ್ವಾಮಿಗಳು ವ್ಯಸನ ಮುಕ್ತ ಸಮಾಜ ಕಟ್ಟಲು ಜೋಳಿಗೆಯಲ್ಲಿ ದುಶ್ಚಟಗಳು ಹಾಕಿ ಎಂದು ಜನರ ಮಧ್ಯದಲ್ಲಿ ಅಲೇದಾಡಿದ ಶರಣರು ಇಂತಹ ಕೆಲಸ ಯಾವುದೇ ಸರಕಾರಗಳಿಂದ ಅಸಾಧ್ಯ ಇಂತಹ ಮಹಾನ್ ಶರಣ-ರ ಆದರ್ಶಗಳು ಅಳವಡಿಸಿಕೊಂಡು ಸಾಗಬೇಕು ಎಂದರು.

ಶಿರಶ್ಯಾಡ ಶ್ರೀಮಠದ ಷ.ಬ್ರ,ಮುರುಘೇಂದ್ರ ಶಿವಾಚಾರ್ಯರು ದಿವ್ಯಸಾನಿಧ್ಯವಹಿಸಿ ಆಶೀರ್ವಚನ ನೀಡಿದರು.

ಎಸ್ಸಿ ಅನುರಾಧಾ ವಸ್ತ್ರದ ಮಹಾತ್ಮಾಗಾಂಧಿ ಭಾವಚಿತ್ರಕ್ಕೆ ಪುಸ್ಪನಮನ ಸಲ್ಲಿಸಿ ಮಾತನಾಡಿದರು.

ಬಿ.ಡಿ ಪಾಟೀಲ, ಪ್ರಕಾಶ ಬಿರಾದಾರ, ರುದ್ರಪ್ಪ ಪೂಜಾರಿ, ರಾಝೇಸಾಬ ನಧಾಪ, ಪ್ರಾದೇಶಿಕ ನಿರ್ದೇಶಕ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಟ್ರಸ್ಟ ಕಲಬುರ್ಗಿ ದಿನೇಶ ಪೂಜಾರಿ ಹಾಗೂ ಸ್ವಸಹಾಯ ಗುಂಪುಗಳ ಮಹಿಳೆಯರು, ಜಿಲ್ಲಾ ಜನಜಾಗೃತಿ ವೇದಿಕೆ ವಿಜಯಪೂರ ಪದಾಧಿಕಾರಿಗಳು ಇದ್ದರು.

# ಪರೀಕ್ಷೆಯು ಕಠಿಣವಲ್ಲ ಸತತ ಪ್ರಯತ್ನ ಮತ್ತು ಕಠಿಣ ಪರಿಶ್ರಮದಿಂದ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಾಧ್ಯ



**ಇಲಕಲ್ಲ :** ಇಲ್ಲಿಯ ಶ್ರೀ ವಿಜಯ ಮಹಾಂತೇಶ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಐ.ಕ್ಯೂ.ಎ.ಸಿ. ಮತ್ತು ಗಣಿತಶಾಸ್ತ್ರ ವಿಭಾಗದ ಸಹಯೋಗದಲ್ಲಿ "Fast Track to IIT:JAM Winning Stratargies" ಎಂಬ ವಿಷಯದ ಮೇಲೆ ಒಂದು ದಿನದ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಮಹಾವಿದ್ಯಾಲಯದ ಮಾನ್ಯ ಪ್ರಾಚಾರ್ಯರಾದ ಪ್ರೊ. ಎಸ್.ಬಿ.ಬಿರಾದಾರ ಮಾತನಾಡಿ IIT & IISc ಗಳಿಗೆ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರವೇಶವನ್ನು ಪಡೆಯಲು ಇಂತಹ ಕಾರ್ಯಕ್ರಮಗಳಿಗೆ ನಮ್ಮ ಮಹಾವಿದ್ಯಾಲಯದಲ್ಲಿ ಪ್ರೋತ್ಸಾಹವಿದೆ. ಅದನ್ನುಸರಿಯಾಗಿಸದ್ಬಳಕೆಮಾಡಕೊಳ್ಳಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಐ.ಕ್ಯೂ.ಎ.ಸಿ. ಸಂಯೋಜಕರಾದ ಡಾ.ರಮೇಶ ಮಾಳಗಿ ಮಾತನಾಡಿ IIT & IIScಗಳಿಗೆ ಪ್ರವೇಶ ಪಡೆಯುವುದರೇಂದರೆ ಒಂದು ಸಾಧನೆ, ಆ ಸಾಧನೆ ಶಿಖರವನ್ನು ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಏರಬೇಕು ಇದರಿಂದ ತಮ್ಮ ಜೀವನದ ಉನ್ನತ ಮಹಾದ್ವಾರವು ತೆರೆಯಲಿದೆ ಎಂದರು.

ಈ ಸಂದರ್ಭದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಚನ್ನಗಿರಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಕಾರ್ತಿಕ್ ಎಸ್. ಪಿಸೆ ಅವರು ಮಾತಾನಾಡಿ IIT ಪರೀಕ್ಷೆ ಎಂದರೇನು? ಅದನ್ನು ಹೇಗೆ ಪಾಸ ಮಾಡಬೇಕು, ಅದರ Cut-off ಪಶ್ನೆಪತ್ರಿಕೆ ಮಾದರಿ,ಪ್ರಶ್ನೆಗಳ ವಿಧಗಳು ಮತ್ತು ಅವುಗಳ ತಯಾರಿಯ ಕುರಿತು ಕಾರ್ಯಾಗಾರದಲ್ಲಿ ಮಾತನಾಡಿದರು.

IIT ಪರೀಕ್ಷೆಯು ಕಠಿಣವಲ್ಲ ಸತತ ಪ್ರಯತ್ನ, ವಿಷಯದ ಅರ್ಥೈಯಿಸುವಿಕೆ ಮತ್ತು ಕಠಿಣ ಪರಿಶ್ರಮದಿಂದ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಸಾಧ್ಯವೆಂದು ತಿಳಿಸಿದರು. ಪ್ರಶ್ನೆಗಳನ್ನು ಸುಲಭ ರೀತಿಯಲ್ಲಿ ಬಗೆಹರಿಸಲು ಉಪಾಯ ಹೇಳಿದರು ಮಾದರಿ ಪ್ರಶ್ನೆಗಳನ್ನು ಬಿಡಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ವಿದ್ಯಾರ್ಥಿಗಳು ತಮ್ಮ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರು. ವೇದಿಕೆ ಮೆಲೆ ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಶ್ರೀಮತಿ ಲತಾ ಲಮಾಣಿ ಉಪಸ್ಥಿತರಿದ್ದರು. ಮಹಾವಿದ್ಯಾಲಯದ ವಿಜ್ಞಾನ ವಿಭಾಗದ ಪ್ರಾಧ್ಯಾಪಕರಾದ ಶ್ರೀ ವಿಜಯಕುಮಾರ ತುಂಬದ, ಶ್ರೀ ಪ್ರಶಾಂತ ಏಕಬೋಟೆ, ಶ್ರೀ ಸಂವಾದ ಜರ್ಲಿ, ಶ್ರೀಮತಿ ಶಂಕ್ರಮ್ಮ ಗುಮ್ಮ, ಶ್ರೀಮತಿ ಕಾವ್ಯಾ ವನಗೇರಿ, ಶ್ರೀಮತಿ ಸಂಗೀತಾ ಮೇರಾಕೋರ, ಶ್ರೀಮತಿ ಬಿ.ಎಂ.ನದಾಫ, ಶ್ರೀಮತಿ ಎಸ್.ಎಸ್. ಚಳಗೇರಿ, ಶ್ರೀಮತಿ ಪ್ರಿಯಾಂಕ ಅತಲಟ್ಟಿ, ಶ್ರೀ ಮಹಾಂತೇಶ ನಾಯನೇಗಲಿ ಇತರರು ಹಾಜರಿದ್ದರು.ಕಾರ್ಯಕ್ರಮದಲ್ಲಿಕು.ಸಹನಾ ಬುದ್ದಿನ್ನಿ ಪ್ರಾರ್ಥಿಸಿದರು. ಡಾ.ಶ್ರೀಮತಿ ಲತಾ ಲಮಾಣಿ ನಿರೂಪಿಸಿದರು. ಶ್ರೀಮತಿ ಶ್ವೇತಾ ರೋಣದ ವಂದಿಸಿದರು.

## ರೈತರ ಭೂಮಿಯನ್ನು ಕಸಿದುಕೊಳ್ಳುತ್ತಿರುವುದನ್ನು ವಿರೋಧಿಸಿ

# ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ




**ಹುಬ್ಬಳ್ಳಿ:** ಪ್ರತಿಭಟನಾ ಸಭೆಯನ್ನು ಉದ್ದೇಶೀಸಿ ಜಿಲ್ಲಾ ಅಧ್ಯಕ್ಷರಾದ ದೀಪಾ ಧಾರವಾಡ ಮಾತನಾಡಿ ಕೇಂದ್ರ ಮತ್ತು ವಿವಿಧ ರಾಜ್ಯ ಸರ್ಕಾರಗಳ ಏಕಸ್ವಾಮ್ಯ ಪರ ನೀತಿಗಳಿಂದಾಗಿ ರೈತರು ಮತ್ತು ಕೃಷಿ ಕಾರ್ಮಿಕರು ಮತ್ತು ಸಾಮಾನ್ಯ ಜನರು ಅಪಾರ ದುಃಖ ಮತ್ತು ಯಾತನೆಗಳನ್ನು ಎದುರಿಸುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಪ್ರತಿದಿನ ಅವರು ಬದುಕಲು ಬೇರೆ ದಾರಿ ಕಾಣದೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಭೂಕಬಳಿಕೆ ನೀತಿಯು ಬೆಂ-ಕಿಗೆ ತುಪ್ಪ ಸುರಿಯುತ್ತಿದೆ. ಬಹುರಾಷ್ಟ್ರೀಯ ಕಂಪನಿಗಳ ಇಚ್ಛೆ ಮತ್ತು ಆಸೆಗಳನ್ನು ಪೂರೈಸಲು ವಿವಿಧ ರಾಜ್ಯಗಳ ಸರ್ಕಾರಗಳು ವಿವೇಚನೆಯಿಲ್ಲದೆ ಭೂಮಿಯನ್ನು ಕಿತ್ತುಕೊಂಡು ರೈತರು ಮತ್ತು ಕೃಷಿ ಕಾರ್ಮಿಕರನ್ನು ಅವರ ಮನೆ ಮತ್ತು ತೋಟದಿಂದ ಹೊರಹಾಕುತ್ತಿವೆ.

ಇತ್ತೀಚೆಗೆ, ಒಡಿಶಾ ಸರ್ಕಾರವು ಕಿಯೋಂಝಾರ್ ಜಿಲ್ಲೆಯ ಪಟಾನಾ ಬ್ಲಾಕ್‌ನಲ್ಲಿ ಹನ್ನೊಂದು ಸಾವಿರ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳುವುದಾಗಿ ಘೋಷಿಸಿದೆ.

ಹಾಗೆ ಮಾಡಲು, ಅವರು 16 ಹಳ್ಳಿಗಳನ್ನು ಸಂಪೂರ್ಣವಾಗಿ ನಾಶಮಾಡಲಿದ್ದಾರೆ ಮತ್ತು ಸಾವಿರಾರು ಮತ್ತು ಸಾವಿರಾರು ಜನರನ್ನು ನಿರಾಶ್ರಿತರು, ನಿರುದ್ಯೋಗಿಗಳನ್ನಾಗಿ ಪರಿವರ್ತಿಸಲಾಗುವುದು. ಅದೇ ರೀತಿ ಆಂಧ್ರ ರದೇಶ ಸರ್ಕಾರ ಸತ್ಯಸಾಯಿ ಜಿಲ್ಲೆಯಲ್ಲಿ 23 ಸಾವಿರ ಎಕರೆ ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಮತ್ತು ಉತ್ತರ ಪ್ರದೇಶಸರ್ಕಾರಮೊರಾದಾಬಾದ್ ಜಿಲ್ಲೆಯಲ್ಲಿ ಭೂಮಿಯನ್ನು ವಶಪಡಿಸಿಕೊಳ್ಳುವುದಾಗಿ ಘೋಷಿಸಿದೆ.

ಈ ಉದಾಹರಣೆಗಳು ಮಂಜುಗಡ್ಡೆಯ ತುದಿಯಷ್ಟೇ. ಇದಲ್ಲದೆ ಈ ಸರ್ಕಾರಗಳು ಸಾಮಾನ್ಯ ಜನರ ಜೀವನೋಪಾಯದ ಮೇಲೆ ದಾಳಿ ನಡೆಸುತ್ತಿವೆ. ಉದಾಹರಣೆಗೆ, ಉತ್ತರ ಪ್ರದೇಶ ಸರ್ಕಾರವು ಮೊರಾದಾಬಾದ್ ಜಿಲ್ಲೆಯಲ್ಲಿ ನೂರಾರು ಸಾಮಾನ್ಯ ಜನರನ್ನು ತಮ್ಮ ಜೀವನೋಪಾಯದಿಂದ ಹೊರಹಾಕಿತು, ಇದರ ವಿರುದ್ಧ ಅವರು ಕಳೆದ ಮೂರು ವರ್ಷಗಳಿಂದ ಬೀದಿಗಿಳಿದಿದ್ದಾರೆ. ಇದು ಕೇಂದ್ರ ಬಿಜೆಪಿ ಸರ್ಕಾರ ಮತ್ತು ವಿವಿಧ ರಾಜ್ಯಗಳ ಸರ್ಕಾರಗಳು ಸಾಮಾನ್ಯ ಜನರ ಬಗ್ಗೆ ಹೊಂದಿರುವ ವರ್ತನೆ.

ಅವರ ಕೆಲಸವೆಂದರೆ ತಮ್ಮ ಕಾರ-ರೇಟ್ ಯಜಮಾನರನ್ನು ಮಾತ್ರ ತೃಪ್ತಿಪಡಿಸುತ್ತಿವೆ ಎಂದರು.

ಜಿಲ್ಲಾ ಕಾರ್ಯದರ್ಶಿ ಶರಣು ಗೋನವಾರ ಪ್ರತಿಭಟನಾ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ ಈ ಗಂಭೀರ ಪರಿಸ್ಥಿತಿಯಲ್ಲಿ, ಈ ಸರ್ಕಾರಗಳು ತಮ್ಮ ಜನವಿರೋಧಿ ಭೂಕಬಳಿಕೆ ನೀತಿಯಿಂದ ದೂರವಿರಲು ಮತ್ತು ರೈತರು ಮತ್ತು ಕೃಷಿ ಕೃಷಿಕರು ಬದುಕುಳಿಯಲು ಸಾಧ್ಯವಾಗುವಂತೆ ರೈತ ಪರ ಕೃಷಿ ನೀತಿಗಳನ್ನು ತೆಗೆದುಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಅಖಿಲ ಭಾರತ ರೈತ ಕೃಷಿ ಕಾರ್ಮಿಕರ ಸಂಘಟನೆ ನಿಮ್ಮನ್ನು ಒತ್ತಾಯಿಸುತ್ತೇದೆ ಎಂದರು.

ಪ್ರತಿಭಟನೆಯಲ್ಲಿ ಶಿವಲಿಂಗಪ್ಪ ಉಣಕಲ್ , ಕಲ್ಲಪ್ಪ ಬಾಡ, ದಿವಾಸಾಬ್ ತುಮಕಿ,ರಮೇಜಾ ,ಕರಿಬಸಪ್ಪ ನೇಕಾರ, ಮಹದೇವಿ ಕಿತ್ತೂರು ಮುಂತಾದವರರು ಇದ್ದರು.

# ಅಂಬೇಡ್ಕರ್ ಪುತ್ಥಳಿ ನಿರ್ಮಾಣ ಕಾಮಗಾರಿ ವೀಕ್ಷಣೆ ಮಾಡಿದ ಸಿದ್ದು ಸವದಿ



**ತೇರದಾಳ:** ಇಲ್ಲಿನಅಂಬೇಡ್ಕರ್‌ವೃತ್ತದಲ್ಲಿ ಅಂದಾಜುಒಂದುಕೋಟಿರೂ.ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ನೂತನ ಪುತ್ಥಳಿ ಕಾಮಗಾರಿಯನ್ನು ಶಾಸಕ ಸಿದ್ದು ಸವದಿ ವೀಕ್ಷಣೆ ಮಾಡಿದರು. 2022 ರಲ್ಲಿ ಮಂಜೂರಾದ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆ ವಹಿಸಿಕೊಂಡಿದ್ದು, ಕಲ್ಲು ಕೆತ್ತನೆಯ ಕೆಲಸ ಹಾಗೂ ಪುತ್ತಳಿ ಪ್ರತಿಷ್ಠಾಪಿಸುವ ಜಾಗದ ಕುರಿತು ದಲಿತ ಮುಖಂಡ ರಮೇಶ ಧರೆನ್ನವರ ಅವರಿಂದ ಮಾಹಿತಿ ಪಡೆದುಕೊಂಡರು. ದೇಶದ ಸಂವಿಧಾನ ರಚಿಸುವ ಮೂಲಕ

ಪ್ರತಿಯೊಬ್ಬ ನಾಗರಿಕನಿಗೆ ಅವರ ಹಕ್ಕು ನೀಡಿದ ಡಾ. ಬಿ. ಆರ್. ಅಂಬೇಡ್ಕರ್ ಅವರ ಪುತ್ಥಳಿ ನಿರ್ಮಾಣಕ್ಕೆ ಕೈ ಜೋಡಿಸುತ್ತಿರುವುದೆ ಒಂದು ಪುಣ್ಯದ ಕೆಲಸ ಎಂದು ಶಾಸಕ ಸವದಿ ಅಭಿಮತ ವ್ಯಕ್ತಪಡಿಸಿದರು.

ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ನಡೆಸಿ ಬೇಗನೆ ಪೂರ್ಣಗೊಳಿಸುವಂತೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿ ಎಂದು ಶಾಸಕ ಸವದಿ ಅವ-ರಿಗೆ ದಲಿತ ಮುಖಂಡರು ಮನವಿ ಮಾಡಿಕೊಂಡರು. ಬಿಜೆಪಿ ನಗರ ಘಟಕ ಅಧ್ಯಕ್ಷ ಮಹಾವೀರ ಕೊಕಟನೂರ, ಪುರಸಭೆ ಸದಸ್ಯ ಸಚಿನ ಕೊಡತೆ, ಪಿಕೆಪಿ-ಎಸ್ ನಿರ್ದೇಶಕ ಅಲ್ಲಪ್ಪ ಬಾಬಗೊಂಡ, ಎಪಿಎಂಸಿ ಮಾಜಿ ಅಧ್ಯಕ್ಷ ವರ್ಧಮಾನ ಕಡಹಟ್ಟಿ, ಶಂಕರ ಕುಂಬಾರ, ವಿದ್ಯಾಧರ ಧರೆನ್ನವರ, ಪ್ರಕಾಶ ಹೊಸಮನಿ, ವಿಠ್ಠಲ ಹಾಡಕರ ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State